ಸೆಪ್ಟೆಂಬರ್ 8, 1990, ಬೆಲೆ : ರೂ. 1-50

4



'ಅಚಲ' ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ/ಡ್ರಾಫ್ಟ್ ಮೂಲಕ ಕಳುಹಿಸಿ.
ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೇನ್, ವೈಯಾಳಿಕಾವಲ್
ಬೆಂಗಳೂರು–560 003.

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಚಂದಾ ವಿವರ

ವಾರ್ಷಿಕ ಚಂದಾ	:	ರೂ 10–00
ಬಿಡಿ ಪ್ರತಿ	:	ರೂ 1–50
ವಿಶೇಷ ಪ್ರತಿ	:	ರೂ 2–50
ಅಜೀವ ಚಂದಾ	:	ರೂ 100–00

Printed at PRINTSWELL, 78, 2nd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, Vyalikaval, Bangalore-560 003.
Editor : N. GAYATRI

ವಿಮೋಚನೆಯ ಕೀಲಿಕೈ

1990–ಅಂತರರಾಷ್ಟ್ರೀಯ ಸಾಕ್ಷರತಾ ವರ್ಷವೆಂದು ಘೋಷಿಸಲ್ಪಟ್ಟಂದಿನಿಂದ ನಮ್ಮ ದೇಶದಲ್ಲೂ ರಾಷ್ಟ್ರಾದ್ಯಂತ ಸಾಕ್ಷರತೆಗೆ ಸಂಬಂಧಪಟ್ಟ ಕಾರ್ಯಕ್ರಮಗಳು, ಸಮಾರಂಭಗಳು ನಡೆಯುತ್ತಾ ಬಂದಿವೆ. ಅನಕ್ಷರತೆಯು ವಿಶೇಷ ಪಿಡುಗಾಗಿ ಅವತರಿಸಿರುವ ನಮ್ಮ ನಾಡಿನಲ್ಲಿ ಅಕ್ಷರ ಚಳುವಳಿ ಇದೀಗ ಹೊಸದಾಗಿ ರೂಪುಗೊಳ್ಳುತ್ತಿರುವ ಕಾರ್ಯಕ್ರಮವೇನಲ್ಲ. ಕಳೆದ ಹಲವಾರು ವರ್ಷಗಳಿಂದಲೂ ಈ ದಿಕ್ಕಿನಲ್ಲಿ ಸರ್ಕಾರದ ವತಿಯಿಂದ, ಮತ್ತು ಸ್ವಯಂಸೇವಾ ಸಂಘಗಳ ನೆರವಿನಿಂದ ಸಾಕ್ಷರತೆಯ ಕಾರ್ಯಕ್ರಮ ನಡೆಯುತ್ತಿದೆ. ಸದ್ದಿಲ್ಲದೆ ಅರ್ಥಪೂರ್ಣವಾಗಿ ನಡೆಯುವ ಕೆಲವು ಕಾರ್ಯಕ್ರಮಗಳು ಹಾಗೂ ಮತ್ತೆ ಕೆಲವೊಮ್ಮೆ ಅಬ್ಬರದಲ್ಲಿ ವಿಜೃಂಭಿಸುವ ಕಾರ್ಯಕ್ರಮಗಳು, ಒಟ್ಟಾರೆಯಾಗಿ ಸಾಕ್ಷರತೆಯನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ನಡೆದ, ನಡೆಯುತ್ತಿರುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಇಂದು ದೇಶದಲ್ಲಿನ ಬೃಹತ್ ಸಮಸ್ಯೆಯೆಡೆಗೆ ಎಲ್ಲರ ಗಮನ ಸೆಳೆಯುವುದು, ಮುಖ್ಯ ಕೆಲಸವಾಗಬೇಕಾಗಿದೆ. ಈ ದಿಕ್ಕಿನಲ್ಲಿ ಅಖಿಲಭಾರತ ಜನ ವಿಜ್ಞಾನ ಚಳುವಳಿಗಳು ರಾಷ್ಟ್ರಮಟ್ಟದಲ್ಲಿ ಸಾಕ್ಷರತೆಗೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜನರ ನಡುವೆ ಸಾಕ್ಷರತೆಯನ್ನು ಕುರಿತಂತೆ ಜನಜಾಗೃತಿಯನ್ನು ಉಂಟುಮಾಡುವ ಹಾಗೂ ಪ್ರೇರಣೆಯನ್ನು ನೀಡುವ ಮುಖ್ಯ ಉದ್ದೇಶ ಹೊತ್ತ ಈ ಚಳುವಳಿಯ ಯಶಸ್ಸು ಅದನ್ನು ನಡೆಸುವವರನ್ನು ನಡೆಸುವ ರೀತಿಯನ್ನು ಅವಲಂಬಿಸಿದೆ.

ಇನ್ನು ಭಾರತೀಯ ಮಹಿಳೆಯರ ವಿಷಯಕ್ಕೆ ಬಂದರೆ, ಅವರಲ್ಲಿ ಬಹಳಷ್ಟು ಮಂದಿ ಅನಕ್ಷರಸ್ಥರು. ಪ್ರತಿ ನೂರು ಮಹಿಳೆಯರ ಪೈಕಿ ಕೇವಲ ಇಪ್ಪತ್ತೈದು ಮಂದಿಗೆ ಮಾತ್ರ ಓದು, ಬರಹ ಗೊತ್ತು ಎಂಬುದು ಒಂದು ಅಂದಾಜು. ಆದರೆ ಗಂಡಸರಲ್ಲಿ ಪ್ರತಿ ನೂರು ಮಂದಿಗೆ 47 ಜನ ಅನಕ್ಷರಸ್ಥರು. ಹಳ್ಳಿಗಳಲ್ಲಿ ಪ್ರತಿ ನೂರು ಮಹಿಳೆಯರ ಪೈಕಿ ಕೇವಲ ಹದಿನೆಂಟು ಮಂದಿ ಮಾತ್ರ ಓದು, ಬರಹ ತಿಳಿದವರು. ಕಲಿತ ಮಹಿಳೆಯರ ಪೈಕಿ ಬಹುತೇಕ ಮಂದಿ ನಗರಗಳಲ್ಲಿರುವವರು. ದೇಶದ ಅರ್ಧದಷ್ಟು ಜಿಲ್ಲೆಗಳಲ್ಲಿ ಪ್ರತಿ ನೂರು ಮಹಿಳೆಯರ ಪೈಕಿ 12 ಮಹಿಳೆಯರು ಮಾತ್ರ ಓದು, ಬರಹ ಬಲ್ಲವರು. ಪರಿಶಿಷ್ಟ ಜಾತಿಯ ಮಹಿಳೆಯರಲ್ಲಿ ಪ್ರತಿ ನೂರಕ್ಕೆ ಐದು ಮಂದಿಗೆ ಮಾತ್ರ ಓದು, ಬರಹ ಗೊತ್ತು.

ಮಹಿಳೆಯ ಅನಕ್ಷರತೆಗೆ ಹಲವಾರು ಕಾರಣಗಳನ್ನು ಗುರುತಿಸಬಹುದಾಗಿದೆ. ಸಮಾಜದಲ್ಲಿನ ಬಡತನ ಹಾಗೂ ಅದರ ಪರಿಣಾಮವಾಗಿರುವ ದುಸ್ತರ ಜೀವನ ಸ್ಥಿತಿಯೇ ಮುಖ್ಯ ಕಾರಣ. ಬಡತನದ ಪರಿಣಾಮವಾಗಿ ಬದುಕಿನ ತಾಪತ್ರಯದ ಹೊರೆ ಗಂಡಿಗಿಂತಲೂ ಹೆಣ್ಣಿನ ಮೇಲೇ ಹೆಚ್ಚು ಎನ್ನುವುದು ಸ್ಪಷ್ಟ ಕಾರಣ. ಬಹಳ ಮಂದಿ ಭಾರತೀಯ ಮಹಿಳೆಯರು ದುಡಿಮೆಗಾರರು, ಅವರು ಹೊಲಗದ್ದೆಗಳಲ್ಲಿ ಕೂಲಿ ಮಾಡುವರು. ಬಿತ್ತನೆ, ಕಳೆ ಕೀಳುವುದು, ನೀರು ಹಾಯಿಸುವುದು. ಕಸಿ ಮಾಡುವುದು ಪೈರು ನೆಡುವುದು ಮುಂತಾದ ಎಲ್ಲದರಲ್ಲೂ ದುಡಿದು ದಿನದ ಕಠಿಣ ಪರಿಶ್ರಮದ ನಂತರ ಮನೆಗೆ ಹಿಂತಿರುಗಿದ ಅವರಿಗೆ ಗೃಹಕೃತ್ಯದ ಹೊರೆ ಕಾದಿರುತ್ತದೆ. ಇವೆಲ್ಲದರ ಜೊತೆಗೆ ಅವಳಿಗೆ ಓದಲು, ಬರೆಯಲು, ಅವಕಾಶವೂ ಇಲ್ಲ; ಪ್ರೋತ್ಸಾಹವೂ ಇಲ್ಲ. ಸಮಾಜದಲ್ಲಿ ಮಹಿಳೆಗಿರುವ

ಕೀಳು ಸ್ಥಾನಮಾನವು ಅವಳ ದುಸ್ಥಿತಿಗೆ ಕಾರಣವಾಗಿದೆ. ಮಹಿಳೆಯನ್ನು ಗಂಡಸಿನ ಅವಲಂಬನೆಗೆ ತೊಡಗಿಸಿ ಅವಳನ್ನು ಅವನ ಖಾಸಗಿ ಆಸ್ತಿ ಎನ್ನುವಂತೆ ನಡೆಸಿಕೊಳ್ಳಲಾಗುತ್ತದೆ. ಇನ್ನು ಸಾಂಪ್ರದಾಯಿಕ ಸಂಕೋಲೆಗಳಾದ ವರದಕ್ಷಿಣೆ, ಅದ್ದೂರಿಯ ವಿವಾಹ ಮುಂತಾದವುಗಳಿಂದ ಹೆಣ್ಣನ್ನು ಸಮಾಜದಲ್ಲಿ ಒಂದು ದೊಡ್ಡ ಹೊರೆಯೆಂಬ ರೀತಿಯಲ್ಲಿಯೇ ಭಾವಿಸಲಾಗುತ್ತದೆ.

ಹೆಣ್ಣಿನ ಎಲ್ಲ ಸಮಸ್ಯೆಗಳನ್ನು ಸಾಕ್ಷರತೆ ನಿವಾರಿಸಬಲ್ಲುದಲ್ಲವಾದರೂ ಹೆಣ್ಣಿನ ವಿಮೋಚನೆಯತ್ತ ಸಾಕ್ಷರತೆ ಒಂದು ಮಹತ್ವದ ಹೆಜ್ಜೆ ; ಅಗತ್ಯವಾದ ಹಾಗೂ ಅನಿವಾರ್ಯದ ಹೆಜ್ಜೆ. ಅಕ್ಷರಸ್ಥ ಮಹಿಳೆ ಅನಕ್ಷರಸ್ಥ ಮಹಿಳೆಗಿಂತ ಹೆಚ್ಚು ಸ್ವತಂತ್ರಳು. ಪರಾವಲಂಬನೆ ಕಡಿಮೆಯಾಗಿ ಸ್ವಾವಲಂಬನೆಯನ್ನು ಸಾಧಿಸುವತ್ತ ಅಕ್ಷರಜ್ಞಾನ ಬಹು ಮುಖ್ಯ ಮೈಲಿಗಲ್ಲು. ಮಹಿಳೆ ಗಳಿಸುವ ಅಕ್ಷರಸ್ಥ ಜ್ಞಾನ ಕ್ರಿಯಾತ್ಮಕವಾಗಿದ್ದು ಅವರ ದೈನಂದಿನ ಕಾರ್ಯಗಳಲ್ಲಿ ನೆರವಾಗುವಂತಿದ್ದಲ್ಲಿ ಹೆಣ್ಣಿನ ವ್ಯಕ್ತಿತ್ವದ ಪರಿಪೂರ್ಣತೆಗೆ ಕಾರಣವಾಗುತ್ತದೆ.

ಅಕ್ಷರ ಜ್ಞಾನದಿಂದ ತತ್‌ಕ್ಷಣ ಉಂಟಾಗುವ ಲಾಭವೆಂದರೆ ಮಹಿಳೆಯ ಆರೋಗ್ಯ ಸುಧಾರಣೆ ಹಾಗೂ ಅವಳ ಮಗುವಿನ ಪೋಷಣೆ. ಒಂದೇ ಸಾಮಾಜಿಕ, ಆರ್ಥಿಕ ಗುಂಪಿಗೆ ಸೇರಿದ ಅನಕ್ಷರಸ್ಥ ಮಹಿಳೆಗಿಂತ ಅನಕ್ಷರಸ್ಥ ಮಹಿಳೆಯ ಮಕ್ಕಳು ಬದುಕಿ ದೊಡ್ಡವರಾಗಿ ಬೆಳೆಯುವ ಅವಕಾಶಗಳು ಹೆಚ್ಚು ಎಂದು ವೈಜ್ಞಾನಿಕ ಅಧ್ಯಯನಗಳು ತಿಳಿಸಿವೆ. ಆರೋಗ್ಯ, ಊಟೋಪಚಾರ, ರೋಗ ನಿರೋಧ, ನೈರ್ಮಲ್ಯವನ್ನು ಕುರಿತು ಮಾಹಿತಿಗಳು ಕಲಿತ ಮಹಿಳೆಗೆ ಹೆಚ್ಚಾಗಿ ಲಭಿಸುತ್ತದೆ. ಸಮಾಜದಲ್ಲಿ ದೊರೆಯುವ ಆರೋಗ್ಯ ಸೌಲಭ್ಯಗಳ ಸಮಗ್ರ ಪ್ರಯೋಜನವನ್ನು ಅಕ್ಷರಸ್ಥ ತಾಯಿ ಪೂರ್ಣವಾಗಿ ಪಡೆಯಬಲ್ಲಳು. ಅಕ್ಷರಸ್ಥ ಮಹಿಳೆಯರಿಗೆ ಅನಕ್ಷರಸ್ಥ ಮಹಿಳೆಗಿಂತ ಸರಾಸರಿ ಕಡಿಮೆ ಮಕ್ಕಳು. ಮಹಿಳೆಯರಿಗೆ ಅಕ್ಷರಜ್ಞಾನ ನೀಡುವುದಕ್ಕಿಂತ ಬೇರೆ ಯಾವುದೇ ಮಾರ್ಗದಿಂದಲೂ ಜನಸಂಖ್ಯಾ ನಿಯಂತ್ರಣವನ್ನು ಯಶಸ್ವಿಯಾಗಿ ಮಾಡಲು ಸಾಧ್ಯವಿಲ್ಲ. ಅಕ್ಷರಸ್ಥ ಮಹಿಳೆ ಜನನ ನಿಯಂತ್ರಣದ ವಿಧಾನಗಳ ಬಗ್ಗೆ ತಿಳಿದುಕೊಂಡು ಆಯ್ಕೆ ಮಾಡಿಕೊಳ್ಳಲು, ಅವುಗಳ ಉಪ ಪರಿಣಾಮಗಳನ್ನು ನಿರ್ವಹಿಸಲು ಮತ್ತು ಮಾಹಿತಿ ಪಡೆಯಲು ಅಕ್ಷರಸ್ಥ ಮಹಿಳೆಗೆ ಸಾಧ್ಯ. ಗಂಡ ಬಿಟ್ಟ ಮಹಿಳೆಯರಿಗೆ, ಅಳಿಯಂದಿರ ಕೋಟಲೆಗೆ ಒಳಗಾದವರಿಗೆ, ಸವತಿಯ ಕಾಟಕ್ಕೆ ಸಿಕ್ಕವರಿಗೆ, ಆಸ್ತಿ ಹಕ್ಕಿನಿಂದ ವಂಚಿತರಾದವರಿಗೆ, ಕಾನೂನು ಬಾಹಿರವಾಗಿ ಹೊರಹಾಕಲ್ಪಟ್ಟವರಿಗೆ ವಿಶೇಷ ಕಾನೂನಿನ ರಕ್ಷಣೆ ಇದೆ. ಬಹುತೇಕ ಮಹಿಳೆಯರಿಗೆ ಈ ಕಾನೂನುಗಳ ಬಗ್ಗೆ ಜಾಗೃತಿ ಇಲ್ಲ. ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ಕಾನೂನು ಸಾಕ್ಷರತೆ ಭಾರತೀಯ ಮಹಿಳೆಗೆ ಅತ್ಯಗತ್ಯ.

ಸಾಕ್ಷರತೆ ವಿಮೋಚನೆಯ ಕೀಲಿಕೈ. ಇದನ್ನು ಪಡೆಯಬೇಕಾದರೆ ಒಂದು ಬೃಹತ್ ಹೋರಾಟವೇ ನಡೆಯಬೇಕಾಗಿದೆ. ಇದು ಸಾಮಾಜಿಕವೂ, ಸಾಂಸ್ಕೃತಿಕವೂ ಆದ ಹೋರಾಟ. ಈ ಹೋರಾಟವಿಲ್ಲದೆ ಸ್ತ್ರೀವಿಮೋಚನೆ, ಸ್ತ್ರೀ ಜಾಗೃತಿ ಕನಸಾದೀತು !

ಬಹು ಸಂಖ್ಯಾತ ಅನಕ್ಷರತೆ ಭಾರತದ ಪಾಪ ಹಾಗೂ
ಕಳಂಕ ಆಗಿದೆ. ಅದನ್ನು ತೊಡೆದು ಹಾಕಲೇಬೇಕು

— ಮಹಾತ್ಮಾ ಗಾಂಧಿ

ಮಾತೃದೇವೋಭವ

○ ಶರತ್‌ಚಂದ್ರ

ಜಗತ್ತು ಮತ್ತು ಜೀವನದ ಬಗ್ಗೆ ಅನೇಕ ಮಾತುಗಳನ್ನು ಹೇಳಿದ ಯೇಸುಕ್ರಿಸ್ತನು ಹೆಣ್ಣಿನ ಮೇಲೆ ಆಗುತ್ತಿರುವ ಅತ್ಯಾಚಾರದ ಬಗ್ಗೆ ಎಲ್ಲಿಯೂ ಒಂದು ಮಾತನ್ನೂ ಸ್ಪಷ್ಟವಾಗಿ ಹೇಳಿಲ್ಲ. ಆದರೆ ಜಗದ್ವಿಖ್ಯಾತ, ಸೇಂಟ್ ಪಾಲ್ ಮಾತ್ರ, 'ಧರ್ಮದ ಬಗೆಗೆ ಸ್ತ್ರೀಯರು ಪುರುಷರಂತೆ ಏನನ್ನೂ ಪ್ರಶ್ನಿಸಕೂಡದು, ಅವರು ಯಾವಾಗಲೂ ತಮ್ಮ ಸ್ವಾಮಿಗೆ ಅಧೀನರಾಗಿರಬೇಕು' ಎಂದು ಹೇಳಿದ್ದಾನೆ. 'ಯಾವ ಕಾರಣಕ್ಕಾಗಿ ಸ್ತ್ರೀಯರನ್ನು ಪುರುಷರಿಗಾಗಿಯೆಂದು ದೇವರು ಸೃಜಿಸಿದನೋ ಅವೇ ಕಾರಣಕ್ಕಾಗಿ ಅವನು ಪುರುಷರನ್ನೂ ಸ್ತ್ರೀಯರ ಸಲುವಾಗಿ ಸೃಷ್ಟಿಸಲಿಲ್ಲ; ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು. ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು, ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ, ಅವರ ಮುಕ್ತಿಗೆ ಉಪಾಯವೇ ಇಲ್ಲ; ಆದರೆ, ಅವರು ಗರ್ಭಧಾರಣ ಮಾಡಿದರೆ ಮಾತ್ರ ಅವರಿಗೆ ಸದ್ಗತಿಯು ಸಿಕ್ಕರೂ ಸಿಗಬಹುದು' — ಎಂದು ಸೇಂಟ್ ಪಾಲ್ ಘೋಷಿಸಿದ್ದಾನೆ. ದೇವರನ್ನು ಕಂಡಿದ್ದ ಈ ಸೇಂಟ್ ಪಾಲ್‌ನ ಹೇಳಿಕೆ ಎಷ್ಟೊಂದು ಸುಂದರ ! ಯುರೋಪದ ಯಾವ ಧರ್ಮಗ್ರಂಥವನ್ನು ತೆಗೆದುಕೊಂಡು ನೋಡಿದರೂ ಇಂಥ ಮಾತುಗಳೇ ಸಿಗುತ್ತವೆ. ನಮ್ಮ ಶಾಸ್ತ್ರಗಳಲ್ಲಿ ಕೂಡ–ಸಂತಾನದ ಕಾರಣಕ್ಕಾಗಿಯೇ ಸ್ತ್ರೀಯರು 'ಭಾಗ್ಯವಂತ'ರು, ಪುತ್ರನನ್ನು ಪಡೆಯುವುದಕ್ಕಾಗಿಯೇ ಪತ್ನಿ–ಗ್ರಹಣದ ವ್ಯವಸ್ಥೆಯಾಗಿದೆ–ಎಂದು ಬರೆದಿದೆ. ಜಗತ್ತಿನ ಯಾವುವೇ ದೇಶದ ಇತಿಹಾಸ ಮತ್ತು ಧರ್ಮಗ್ರಂಥಗಳನ್ನು ಸ್ವಲ್ಪ ವಿವೇಚಿಸಿ ನೋಡಿದರೂ ಸುಮಾರಾಗಿ ಇಂಥ ವ್ಯವಸ್ಥೆ–ಮಾತುಗಳೇ ಕಂಡುಬರುತ್ತವೆ.

ಸ್ತ್ರೀಯರನ್ನು ಅವರ ವ್ಯಕ್ತಿತ್ವಕ್ಕಾಗಿಯೇ ಗೌರವಿಸದೆ, ಈ ಗೌರವವು ಅವರ ಸಂತಾನ ಮತ್ತು ಪುತ್ರ–ಪ್ರಸವವನ್ನು ಮಾತ್ರ ಅವಲಂಬಿಸಿರುತ್ತದೆ. ಪುರುಷನ ದೃಷ್ಟಿ ಸ್ತ್ರೀ–ಜೀವನದ ಉದ್ದೇಶ ಇದೊಂದೇ ಆದದ್ದಾದರೆ, ಇದು ಅವಳ ಗೌರವದ ಮಾತೇನಲ್ಲ. ನಿಜವಾದ ಮಾತು ಹೀಗಿದೆ: ಸಂತಾನ ಪ್ರಸವದ ಹೊರತು ಸ್ತ್ರೀಯಿಂದ ಬೇರೆ ಯಾವ ಆಶೆಯೂ ಪುರುಷನಿಗಿಲ್ಲ. ಅವಳಿಗೆ ಇದುವರೆಗೆ ದೊರೆತ ಗೌರವವೂ ಅವಳು ಮಕ್ಕಳನ್ನು ಹೆರುತ್ತಾಳೆಂಬ ಕಾರಣದಿಂದಲೇ. 'ಕ್ಷೇತ್ರಜ' ಸಂತಾನೋತ್ಪತ್ತಿಯ ವಿಧಿಯನ್ನೂ ನಮ್ಮ ಶಾಸ್ತ್ರಗಳಲ್ಲಿ ಹೇಳಲಾಗಿದೆ. ಹೀಗೆಯೇ ಕುಂತಿಯು ಪಂಚಪಾಂಡವರನ್ನೂ ಮತ್ತು ಅಂಬಾಲಿಕೆಯು ಪಾಂಡು–ಧೃತರಾಷ್ಟ್ರರನ್ನೂ ಪಡೆದಿದ್ದಳು. ಆದರೆ ಇದು ಸತೀ–ಸ್ತ್ರೀಯರಿಗೆ ಪ್ರಶಂಸಾರ್ಹ ಮಾತೇನಲ್ಲ. ಪ್ರಾಚೀನ ಯಹೂದಿಯರ ಸಮಾಜದಲ್ಲಿಯೂ ಮಕ್ಕಳಿಲ್ಲದ, ವಿಧವೆಯಾದ ಅಣ್ಣನ ಹೆಂಡತಿಯು, ಸಂತಾನೋತ್ಪತ್ತಿಯ ಸಲುವಾಗಿ, ಮೈದುನನ ಉಪ–ಪತ್ನಿಯಾಗಿ ಇರಬೇಕಾಗುತ್ತಿತ್ತು. 'ಡ್ಯೂಟರ್‌ನಮಿ' ಎಂಬ ಧರ್ಮ ಗ್ರಂಥದಲ್ಲಿ, ಇಪ್ಪತ್ತೈದನೆಯ ಪ್ರಕರಣದಲ್ಲಿ ಸ್ತ್ರೀಯರ ಬಗೆಗಿದ್ದ ಶಾಸ್ತ್ರೀಯ ವಿಧಿಗಳನ್ನು ಓದಿದರೆ ಮನಸ್ಸು ಕಲಮಲಗೊಳ್ಳುತ್ತದೆ. ಸಂತಾನೋತ್ಪತ್ತಿಯ ಇಚ್ಛೆಯಿಂದ ಯಹೂದಿಯರು ಸ್ತ್ರೀಯರಿಗೆ ಮಾಡುತ್ತಿದ್ದ ಅನ್ಯಾಯಗಳೆಲ್ಲ ಅದರಲ್ಲಿ ವರ್ಣಿತವಾಗಿದೆ'. ಹೀಗೆಯೇ ಆಫ್ರಿಕೆಯಲ್ಲಿಯೂ ಸ್ತ್ರೀಯರು ನಿರುಪಾಯರಾಗಿ ಅನೇಕ ಕಷ್ಟಸಾಧನೆಗಳನ್ನು ಮಾಡಬೇಕಾಗುತ್ತಿತ್ತು. 'ಇನ್ನುಳಿದ ಅನಾಗರಿಕ ಜನರಂತೆ ದಹೋಮನ್ನನೂ, ತನ್ನ ಪರಿವಾರದಲ್ಲಿ ಹೆಚ್ಚು ಜನರಿರುವುದು ಭಗವಂತನ ದೊಡ್ಡ ಕೊಡುಗೆ ಮತ್ತು ಅನುಗ್ರಹ ಎಂದು ಭಾವಿಸುತ್ತಾನೆ'–ಎಂದು ಹರ್ಬರ್ಟ್ ಸ್ಪೆನ್ಸರ್ ಬರೆದಿದ್ದಾರೆ. ಇನ್ನೂ ಮುಂದುವರಿಯುತ್ತ, 'ಆಫ್ರಿಕೆಯ ಪೂರ್ವಭಾಗದಲ್ಲಿ ಅವಿವಾಹಿತ ಸ್ತ್ರೀಯೊಬ್ಬಳು ಬಹಳ ಮಕ್ಕಳ ತಾಯಿಯಾಗುವುದು ಕಲಂಕದ ಮಾತಲ್ಲ. ಹೆಚ್ಚು ಮಕ್ಕಳನ್ನು ಹಡೆಯುವ ಸ್ತ್ರೀಯ ಉಳಿದ ದೋಷಗಳನ್ನೆಲ್ಲ ಅಲಕ್ಷಿಸಿಬಿಡಲಾಗುತ್ತದೆ'—ಎಂದೂ ಅವರು ಬರೆದಿದ್ದಾರೆ. ಓಟಿಯಾಕ್ಸ್

20ನೇ ಪುಟಕ್ಕೆ



ದೇವದಾಸಿಯರ ಅಧ್ಯಯನ

○ ಗೌರಿ

ಜೋಗನ್ ಸರ್ಕಾರ್‌ರವರು ವಿಮೋಚನಾ ದೇವದಾಸಿ ಪುನರ್‌ವಸತಿ ಸಂಘದ ಸಹ ಸಂಚಾಲಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ಈ ಕೃತಿಯಲ್ಲಿ ಲೇಖಕರು ಹೇಗೆ ಪ್ರಗತಿಪರ ಶಾಸನಗಳು ಧಾರ್ಮಿಕ ಪದ್ಧತಿಗಳಾದ ಸತಿ ದೇವದಾಸಿ, ನರಬಲಿ ಮುಂತಾದವುಗಳನ್ನು ನಿಷೇಧಿಸಿದ್ದಾಗ್ಯೂ ಅವು ಆಚರಣೆಯಲ್ಲಿ ಉಳಿದು ಬಂದಿದೆ, ಎಂಬುದನ್ನು ವಿವರಿಸುತ್ತಾರೆ. "ಸುಧಾರಣಾ ಚಳುವಳಿಗಳು ಮತ್ತು ಪುನರುತ್ಥಾನದ ಚಳುವಳಿಗಳನ್ನು ಕುರಿತಂತೆ ಭಾರತದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ" ಎನ್ನುವ ಲೇಖಕರು "ಸಮಾಜ ವಿಜ್ಞಾನಿಗಳು ಈ ಪದ್ಧತಿಯ ಉಳಿವಿಗೆ ಮತ್ತು ಮುಂದುವರಿಕೆಗೆ ಕಾರಣಾಂಶಗಳನ್ನು ಕಂಡುಹಿಡಿದು ಅದನ್ನು ಬಹಿರಂಗ ಪಡಿಸಲು ಪ್ರಯತ್ನಿಸಬೇಕು" ಎನ್ನುತ್ತಾರೆ. ಈ ಪುಸ್ತಕದಲ್ಲಿ ಇಂತಹದೊಂದು ಪ್ರಯತ್ನವನ್ನು ಲೇಖಕರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ದೇವದಾಸಿ ಪದ್ಧತಿಯು ಮಹಿಳೆಯರನ್ನು ಕುರಿತದಾದ್ದರಿಂದ ಮಹಿಳೆಯರನ್ನು ಕುರಿತ ಕೆಲವು ಧಾರ್ಮಿಕ ಆಚರಣೆಗಳನ್ನು ವಿಮರ್ಶಿಸುತ್ತಾರೆ. ಆದರೆ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನವನ್ನು ಕುರಿತಂತೆ ವಿವರಗಳನ್ನು ಗಮನಿಸಿದ್ದರೆ ಇಂತಹ ಅಧ್ಯಯನ ಅಪೂರ್ಣವಾಗುತ್ತದೆ.

ಈ ಪುಸ್ತಕದಲ್ಲಿ ಲೇಖಕರು ಸೂಚಿಸಿರುವಂತೆ ಈ ಅಧ್ಯಯನದ ಮೂಲಭೂತ ಉದ್ದೇಶಗಳು : 1) ದೇವದಾಸಿ ಪದ್ಧತಿಯ ಹುಟ್ಟು ಮತ್ತು ಬೆಳವಣಿಗೆ 2) ಈ ಪದ್ಧತಿಯ ಉಳಿವಿಗೆ ಮತ್ತು ಮುಂದುವರಿಕೆಗೆ ಕಾರಣಗಳು ಮತ್ತು ಮುಖ್ಯವಾಗಿ ಸುಧಾರಣಾವಾದಿ ಮತ್ತು ಪುನರುತ್ಥಾನದ ಚಳುವಳಿಗಳ ಪರಿಣಾಮ ಹಾಗೂ ಸರ್ಕಾರ ಮತ್ತು ಸ್ವಯಂಸೇವಾ ಸಂಘಗಳ ಪಾತ್ರ ಮತ್ತು ಅವರಿಗೆ ಪುನರ್ವಸತಿ ಕಾರ್ಯಕ್ರಮಗಳು.

ಈ ಪುಸ್ತಕದ ಅಧ್ಯಯನಕ್ಕೆ ಕರ್ನಾಟಕದ ಒಂದು ಹಳ್ಳಿಯನ್ನು ಆಯ್ದುಕೊಂಡು (ಅದಕ್ಕೊಂದು ಸುಳ್ಳು ಹೆಸರನ್ನಿಟ್ಟು) ಸುಮಾರು ಎರಡು ವರ್ಷಗಳ ಕಾಲ ಕ್ಷೇತ್ರ ಕಾರ್ಯವನ್ನು ನಡೆಸಲಾಯಿತು. ಅಲ್ಲಿನ ದೇವದಾಸಿಯರೊಂದಿಗೆ ಸಂಪರ್ಕ ಸಾಧಿಸಿ, ಅವರ ಭೂತಕಾಲದ ಮತ್ತು ಇಂದಿನ ಸ್ಥಿತಿಯ ವಿವರಗಳ ಮಾಹಿತಿಗಳನ್ನು ಪಡೆಯಲಾಯಿತು.

ದೇವದಾಸಿ ಪದ್ಧತಿಯು ಆಚರಣೆಯಲ್ಲಿ ಭಾರತದ ಯಾವ ಯಾವ ಭಾಗಗಳಲ್ಲಿ ಇತ್ತು ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. "ಉತ್ತರ ಭಾರತದಲ್ಲಿ, ಮಧ್ಯ ಭಾರತದಲ್ಲಿ ಹಾಗೂ ಪೂರ್ವದ ಪುರಿಯಲ್ಲಿ, ವಿಜಯನಗರ ಸಾಮ್ರಾಜ್ಯ, ಆಂಧ್ರಪ್ರದೇಶ, ದಕ್ಷಿಣ ಭಾರತದಲ್ಲಿ ಬಹುಮುಖ್ಯವಾಗಿ ಕರ್ನಾಟಕದಲ್ಲಿ ಇದರ ಆಚರಣೆಯನ್ನು ಗುರುತಿಸಬಹುದು." ದೇವದಾಸಿ ಪದ್ಧತಿಯ ಉಗಮದ ಬಗೆಗಿರುವ ಹಲವಾರು ಸಿದ್ಧಾಂತಗಳ ವಿಶ್ಲೇಷಿಸುವ ಲೇಖಕರು ಅವುಗಳೆಲ್ಲಾ ಸಂಶೋಧನೆಯಲ್ಲಿ ನೆರವಾಗಬಹುದೇ ಹೊರತು ಸಂಪೂರ್ಣ ತೃಪ್ತಿ ಕೊಡುವುದಿಲ್ಲ, ಎನ್ನುತ್ತಾರೆ. ಈ ಸಿದ್ಧಾಂತಗಳಲ್ಲಿ ಕೆಲವು ನರಬಲಿಗೆ ಪರ್ಯಾಯವಾಗಿ ಈ ಪದ್ಧತಿ ಬಂದಿರಬಹುದೇ ? ಎಂಬ ಸೂಚನೆಯನ್ನು ಕೊಡುತ್ತದೆ. ಹಾಗೆಯೇ ಅಪರಿಚಿತರಿಗೆ ಅತಿಥಿಗಳಿಗೆ ದೇಹದ ಸೇವೆಯ ಉಪಚಾರ ಮಾಡುವ ಪದ್ಧತಿಯಿಂದಲೋ ಅಥವಾ ಶಿಶ್ನದ ಪೂಜೆಯಿಂದ ಬಂದಿರಬಹುದೋ, ಎಂಬ ಸೂಚನೆಗಳನ್ನು ಕೊಡುತ್ತದೆ. ಆದರೆ ಲೇಖಕರು ನಂಬಿ, ಪ್ರತಿಪಾದಿಸಿರುವ ಸಿದ್ಧಾಂತವೇ ಹೆಚ್ಚು ಪರಿಗಣನೆಗೆ ಅರ್ಹವೆನಿಸುತ್ತದೆ. ಕೆಳ ಜಾತಿಯ ಜನರನ್ನು ಶೋಷಣೆ ಮಾಡಲೆಂದು ಪುರೋಹಿತಶಾಹಿ ಮಾಡಿಕೊಂಡಿರುವ ವ್ಯವಸ್ಥೆ ಇದಾಗಿರಬಹುದು, ಧರ್ಮದ ಹೆಸರಿನಲ್ಲಿ ಕೆಳಜಾತಿಯ ಹೆಣ್ಣುಮಕ್ಕಳನ್ನು ಶೋಷಿಸಲೆಂದೇ ಈ ವ್ಯವಸ್ಥೆಯನ್ನು ರೂಪಿಸಲಾಗಿದೆ ಎನ್ನುವುದು ಲೇಖಕರ ವಾದ.

20ನೇ ಪುಟಕ್ಕೆ

ಮಹಿಳೆಯರ ಮೇಲಿನ ದೌರ್ಜನ್ಯ

ವೈದ್ಯಕೀಯ ಇಲಾಖೆಯ ಪಾತ್ರ

○ ಡಾ|| ಗಿರಿಜಮ್ಮ

ಅನೇಕ ದೌರ್ಜನ್ಯಗಳ ತುಳಿತಕ್ಕೆ ಒಳಗಾಗುತ್ತಿರುವ ಮಹಿಳೆಯ ಸ್ಥಾನಮಾನ, ಸುಧಾರಣೆಯ ಪಟ್ಟ ಹೊತ್ತಿದ್ದರೂ, ಮೇಲ್ನೋಟಕ್ಕೆ, ಅನುಕೂಲವಾಗಿದೆಯೆಂದು ಕಂಡರೂ, ಅಮಾನವೀಯ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದ್ದು, ವ್ಯವಸ್ಥೆ ಬದಲಾಗದೇ ಇರುವುದನ್ನು ನೋಡಿದರೆ ಆತಂಕವಾಗುತ್ತದೆ.

ನಮ್ಮ ಸಮಾಜದ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿನ ಪಾಲನೆ, ಪೋಷಣೆ, ಮತ್ತು ಭವಿಷ್ಯ, ಅವಳಿಗೆ ಜೀವನ ಪಥವನ್ನು ತೋರಿಸುವ ಜವಾಬ್ದಾರಿ ತಂದೆ-ತಾಯಿ ಅಥವಾ ಸಹೋದರರುಗಳದ್ದಾಗಿರುತ್ತದೆ.

ಮಹಿಳೆಯರು ತಮ್ಮ ಮೇಲಾಗುತ್ತಿರುವ ಕಿರುಕುಳ, ಸಹಿಸದೆ, ಜೀವವನ್ನೇ ವಿವಿಧ ರೀತಿಗಳಲ್ಲಿ ಕಳೆದು ಕೊಳ್ಳುತ್ತಿರುವ ಹೃದಯವಿದ್ರಾವಕ ಘಟನೆಗಳನ್ನು ಯಾವ ಕಾನೂನು, ಸಮಾಜ ಜನರಿಂದ ಅಡಗಿಸಲು ಅಸಾಧ್ಯವೇನೋ ಎಂಬಂತೆ ಹೆಚ್ಚುತ್ತಿವೆ.

ಹೆಚ್ಚಾಗಿ ಮಹಿಳೆಯರು, ಸಾವನ್ನಪ್ಪುತ್ತಿರುವುದು ಅನೇಕ ಸಮಸ್ಯೆಗಳಿಂದಾದರೂ, ಪ್ರಮುಖವಾಗಿ ಎರಡು ಕಾರಣಗಳಿಂದ

1) ವರದಕ್ಷಿಣೆಯಿಂದ,

2) ಅತ್ಯಾಚಾರದಿಂದ — ಅವಮಾನಿತರಾದ, ದುಃಖಿತರಾದ ಹತಾಶರಾದ ಮಹಿಳೆಯರು.

1) ವರದಕ್ಷಿಣೆಯ ಪಿಡುಗು ಬುಡಸಮೇತ ತೊಡೆದು ಹಾಕುವಲ್ಲಿ, ಕಾನೂನು ತಜ್ಞರ ಹೊಣೆ ಅಪಾರವೆಂದರೆ ತಪ್ಪಾಗಲಾರದು. ಹಾಗೆಯೇ ಬರೀ ಕಾನೂನಿನ ಚೌಕಟ್ಟಿನಲ್ಲೇ, ಸಾಧ್ಯವೆಂದು ಕುಳಿತರಾಗದು. ಆ ಚೌಕಟ್ಟಿನಲ್ಲೇ ಪೂರಕವಾಗುವಂತೆ, ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬಲ್ಲ ಸ್ವಸಾಮರ್ಥ್ಯ ಬಹು ಮುಖ್ಯವಾದುದು. ಕಿರುಕುಳ, ಹಿಂಸೆ ಆಕ್ರಮಣಕ್ಕೊಳಗಾದ ಮಹಿಳೆ, ಅವಮಾನ, ದುಃಖ, ನೋವಿನಿಂದ ಹತಾಶಳಾಗಿ, ಆಕ್ಷಣದಲ್ಲಿ ಜೀವವನ್ನೇ ಕಳೆದುಕೊಳ್ಳುವ ನಿರ್ಧಾರಕ್ಕೆ ಬರಬಾರದು. ದುರ್ಬಲವಾದ ಮನಸ್ಸು, ಬದುಕಿನಿಂದ ಪಲಾಯನ ಮಾಡುವಂತೆ, ಸೂಚಿಸುತ್ತದೆ. ಯಾವುದೇ ರೀತಿಯ ಆಘಾತವನ್ನಾಗಲೀ, ನೋವನ್ನಾಗಲೀ, ದುಃಖವನ್ನಾಗಲೀ ತಡೆದುಕೊಳ್ಳುವ ಶಕ್ತಿ ಅದಕ್ಕಿರದ ಕಾರಣ, ದುರ್ಬಲರು ಆತ್ಮಹತ್ಯೆಯ ನಿರ್ಧಾರ ತೆಗೆದುಕೊಳ್ಳುತ್ತಾರೆ, ಎಂಬ ಮಾನಸಿಕ ತಜ್ಞರ ವಾದವನ್ನು ಹಿಡಿದು, ಇದು ಹತ್ಯೆಯಲ್ಲ, ಆತ್ಮಹತ್ಯೆಯೆಂದು ತೀರ್ಮಾನಿಸಿದರೆ, ಸಾವಿಗೆ ಕಾರಣರಾದವರು ತಪ್ಪಿಸಿಕೊಳ್ಳುವ ಸಾಧ್ಯತೆಗಳೇ ಹೆಚ್ಚು.

ಸಿ.ಓ.ಡಿ.ಯವರ ತನಿಖಾವರದಿಯ ಅಂಕಿ-ಅಂಶಗಳ ಪ್ರಕಾರ 1987 ರಿಂದ 1990ರಲ್ಲಿ, ಬೆಳಕಿಗೆ ಬಂದು ತನಿಖೆಗೆ ಒಳಪಟ್ಟ ಪ್ರಕರಣಗಳು ಒಟ್ಟು 322.

1–ಆರೋಪಿಯು, ಅಪರಾಧಿಯೆಂದು ಸಾಬೀತಾಗಿ ಶಿಕ್ಷೆಗೊಳಪಟ್ಟಿದ್ದಾರೆ.

193–ಪೆಂಡಿಂಗ್ ಟ್ರಯಲ್ ನಲ್ಲಿವೆ.

7–ತನಿಖೆಗೊಳಪಟ್ಟು ಬಿಡುಗಡೆ ಹೊಂದಿದ್ದಾರೆ.

107–ಇನ್ನು ತನಿಖೆಯಲ್ಲಿರುವ ಪ್ರಕರಣಗಳು.

13–ಪ್ರಕರಣಗಳನ್ನು ಸಾಕ್ಷ್ಯಾಧಾರಗಳಿಲ್ಲದೇ ಕೈ ಬಿಟ್ಟು ಬಿಡಲಾಗಿದೆ!

ಇಷ್ಟು ಸಾವುಗಳು ಕೇವಲ ಮಹಿಳೆಯ ಮನೋ ದೌರ್ಬಲ್ಯದಿಂದಲೇ ಎಂದರೆ ವಿಪರ್ಯಾಸವಾದೀತು. ಸಾವು ಸಾಮಾನ್ಯವಾಗಿ,

1) ನೇಣುಹಾಕಿಕೊಂಡು, (ಉಸಿರುಕಟ್ಟಿದ ಸಾವು)
2) 'ಸ್ಟವ್ ಬರ್ಸ್ಟ್'ನಿಂದ.
3) ವಿಷಸೇವನೆಯಿಂದ,
4) ನೀರಿನಲ್ಲಿ ಮುಳುಗಿಸಿರುವ ವಿಧದಲ್ಲಿರಬಹುದು.

ಶವವು 'ಪೋಸ್ಟ್‌ಮಾರ್ಟಂ'ಗೆ ಬಂದಾಗ, ಸಾವಿನ ಕಾರಣ ಖಚಿತವಾಗಿ ತಿಳಿಯುತ್ತದೆ. ಕುತ್ತಿಗೆ ಹಿಸುಕಿಯೋ ಉಸಿರು ಕಟ್ಟಿಸಿಯೋ ಕೊಂದನಂತರ, ನೇಣುಹಾಕಿ ದಂತಹ ದೃಶ್ಯವನ್ನು ಸೃಷ್ಟಿಸಿದರೆ, ಕುತ್ತಿಗೆಯ ಮೇಲಿನ, ಹಗ್ಗದ, ಬೆರಳುಗಳ ಅಥವಾ ಮತ್ತಾವುದರ ಗುರುತುಗಳನ್ನು ಸೂಕ್ಷ್ಮವಾಗಿ ಅವಲೋಕಿಸುವುದೂ ಅಲ್ಲದೆ, ಕುತ್ತಿಗೆಯ ಭಾಗದಲ್ಲಿರುವ ಮೃದುವಾದ ಮೂಳೆ "ಹೈಮಾಡ್" ಎಂಬುದರಿಂದ ಸಾವು ಹತ್ಯೆಯೋ, ಆತ್ಮಹತ್ಯೆಯೋ ಎಂದು ನಿಖರವಾಗಿ ತಿಳಿಸಬಹುದು.

ವಿಷ ಸೇವನೆಯಿಂದಾಗಿದ್ದರೆ, ಉದರದ ಭಾಗ, ಕರುಳಿನ ಭಾಗವನ್ನು ಕತ್ತರಿಸಿ ತೆಗೆದು ರಸಾಯನಿಕ ಪರೀಕ್ಷೆಗೊಳಪಡಿಸಿ, ತಿಳಿಯಬಹುದು. "ಸ್ಟವ್‌ಬರ್ಸ್ಟ್" ಆಗಿ, ಆಕಸ್ಮಿಕವಾಗಿ ಸಿಲಿಂಡರ್ ಸಿಡಿದು, ಸಾವನ್ನಪ್ಪಿದಳೆಂದು ಶವವನ್ನು ತಂದಾಗ, ಆ ಮಹಿಳೆಯ ಸಾವಿನ ಕಾರಣವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಾಗ, ಸಾಯಿಸಿದ ನಂತರ ಸುಟ್ಟ ಗಾಯಗಳೋ, ಅಥವಾ, ನಿಜವಾಗಿಯೂ ಸುಡುವುದರಿಂದ ಸಾವು ಉಂಟಾಗಿದೆಯೋ ಎಂದೂ ಹೇಳಬಹುದು.

ಒಮ್ಮೊಮ್ಮೆ, ನೀರಿಗೆ ತಳ್ಳಿ, ಹತ್ಯೆಮಾಡುವುದು ಸ್ವಲ್ಪ ಕಷ್ಟಕರ, ಅಪಾಯಕರವೆಂದು ತಿಳಿದಿದ್ದಾಗ ವಿಷಸೇವನೆಯಿಂದಲೋ, ಕತ್ತು ಹಿಸುಕಿ ನಂತರ ನೀರಿಗೆ, ಹಾಕಲ್ಪಟ್ಟಿದ್ದರೂ, ಪೋಸ್ಟ್‌ಮಾರ್ಟಂ ನಂತರ, "ಡೈ ಆಟಂ" ಎಂಬ ಕಣಗಳಿಂದ, ಹತ್ಯೆಯೋ, ಆತ್ಮಹತ್ಯೆಯೋ ಎಂದು ಖಚಿತವಾಗಿ ತಿಳಿಸಬಹುದು. ವ್ಯಕ್ತಿಯು ನೀರು ಕುಡಿದು ಮೃತಪಟ್ಟಿದ್ದರೆ, "ಡೈ ಆಟಂ"ಗಳ ಕಣಗಳು ದೇಹದಲ್ಲಿ ಕಂಡುಬರುವುದನ್ನು ಸೂಕ್ಷ್ಮದರ್ಶಕದಲ್ಲಿ ನೋಡಿ ಕಂಡು ಹಿಡಿಯಲಾಗುತ್ತದೆ. ದೇಹವು ಊದಿಕೊಂಡು ಕೊಳೆತು ಹೋಗುತ್ತಿರುವ ಸ್ಥಿತಿಯಲ್ಲಿದ್ದರೂ ಈ ಸೂಕ್ಷ್ಮದರ್ಶಕದ ಪರೀಕ್ಷೆಯಿಂದ ತೀರ್ಮಾನಿಸಬಹುದು.

ಅತ್ಯಾಚಾರದ ಪ್ರಕರಣಗಳು

ನಮ್ಮ ಸಮಾಜದಲ್ಲಿ, ಅತ್ಯಂತ ಹೆಚ್ಚಿನ ಸಂಖ್ಯೆಯ ಅಪರಾಧವೆಂದರೆ, ಮಹಿಳೆಯರ ಮಾನಭಂಗ. ವಯೋಮಿತಿಯಿಲ್ಲದ ಈ ಪ್ರಕರಣಗಳಿಗೆ 8 ರಿಂದ 80 ವಯಸ್ಸಿನ ಮಹಿಳೆಯೂ ತುತ್ತಾಗಬಹುದು. ಸರಾಸರಿ ಪ್ರತಿ ಹದಿನೈದು ತಾಸಿಗೊಂದು, 'ಶೀಲಭಂಗ' ನಡೆಯುತ್ತಿದೆಯೆಂದು ತಿಳಿದು ಬಂದರೂ, ಅಂಕಿ-ಅಂಶಗಳು ನಿಖರವಾಗಿ ಸಿಗುವುದಿಲ್ಲ. ಕಾರಣ, ಯಾವ ಹೆಣ್ಣು ತನಗೆ 'ಶೀಲಭಂಗ' ವಾಗಿದೆಯೆಂದು ಬಹಿರಂಗವಾಗಿ ಹೇಳಿ ಇನ್ನಷ್ಟು ಅವಹೇಳನಕ್ಕೆ ಗುರಿಯಾಗಲು ಅಂಜುವುದೇ ಇದಕ್ಕೆ ಕಾರಣವಿರಬಹುದು.

ದಾಖಲಾದ ಪ್ರಕರಣಗಳಲ್ಲಿ, ಕೆಲವು ವಿಶಿಷ್ಟವಾದವು ಉದಾಹರಿಸಬಹುದು.

1) ಮೈಸೂರಿನಲ್ಲಿ, ಇದೇ ವರ್ಷದ ಫೆಬ್ರವರಿ ತಿಂಗಳಲ್ಲಿ ಶಾಲಾಬಾಲಕಿಯೊಬ್ಬಳನ್ನು ಅಪಹರಿಸಿ, ಮದ್ಯಪಾನ ಮಾಡಿಸಿ, ಮೂರು ದಿನಗಳು ಸತತವಾಗಿ, ಆಕೆಯಮೇಲೆ ಸಾಮೂಹಿಕವಾಗಿ ಅತ್ಯಾಚಾರ ನಡೆಸಿದ ನಂತರ ಆ ಹುಡುಗಿಯನ್ನು ಹಾಸ್ಟೆಲ್‌ನ ಮುಂದೆ ತಂದು ಬಿಸಾಡಲಾಗಿತ್ತು. (ಇದಕ್ಕಾಗಿ ಅಲ್ಲಿನ 'ಸಮತಾ'ದವರು ಧರಣಿಸತ್ಯಾಗ್ರಹ ನಡೆಸಿದ್ದದ್ದನ್ನು ನೆನಪಿಸಿಕೊಳ್ಳಬಹುದುದು.)

2) ಇತ್ತೀಚೆಗೆ ಬೆಳಕಿಗೆ ಬಂದ ಅತ್ಯಂತ ಹೇಯವಾದ ಅತ್ಯಾಚಾರದ ಪ್ರಕರಣವೆಂದರೆ, ಬೀದರಿನ ಭಾಲ್ಕಿ ಎಂಬ ಗ್ರಾಮದಲ್ಲಿ, ತಂದೆಯೇ ಮಗಳನ್ನು ಮೂರು ವರ್ಷಗಳಿಂದಲೂ, ದಿನವೂ ಅತ್ಯಾಚಾರಕ್ಕೊಳಪಡಿಸಿಕೊಂಡು ಬಂದದ್ದು, ಬಯಲಿಗೆ ಬಂದು, ಆತನನ್ನು ಹಿಡಿದು ಕತ್ತೆಯ ಮೇಲೆ ಮೆರವಣಿಗೆ ಮಾಡಿಸಿ, ಪೋಲಿಸ್ ಇಲಾಖೆಗೆ ಒಪ್ಪಿಸಲಾಯಿತು.

3) ಬಸ್ ನಿಲ್ದಾಣದಲ್ಲಿ ಅರವತ್ತರ ವೃದ್ಧೆಯಮೇಲೆ ಅತ್ಯಾಚಾರ ನಡೆಸಿದ ನಂತರ, ಆಕೆಯನ್ನು ಅಲ್ಲಿಯೇ ಕೊಂದು ಹಾಕಿದ್ದ ಪ್ರಕರಣ ಈ ರಾಜಧಾನಿಯಲ್ಲಿಯೇ ಎರಡು ವರ್ಷಗಳ ಹಿಂದೆಯೇ ನಡೆದಿತ್ತು.

"ಮರಕ್ಕಂಜಿ ಕಾಡು ಹೊಕ್ಕರೆ ಹುಲಿ ಬಿಡಲಿಲ್ಲ... ಹುಲಿಗಂಜಿ, ಹುತ್ತವನ್ನೊಕ್ಕರೆ ಹಾವು ಬಿಡಲಿಲ್ಲ" ವೆಂಬಂತೆ, ಮಾನರಕ್ಷಣೆಗಾಗಿ ಮಂಗಳೂರಿನಲ್ಲಿ, ಪೋಲಿಸ್ ಠಾಣೆಗೆ ಹೋದ ವಿದೇಶಿ ಮಹಿಳೆಯಮೇಲೆ ಮಾನಭಂಗಕ್ಕೆ ಪ್ರಯತ್ನ ಮಾಡಲಾಗಿತ್ತು. ನ್ಯಾಯಕ್ಕಾಗಿ, ವರ್ಷಗಟ್ಟಲೇ, ಕಾಯದೆ ವಿದೇಶಕ್ಕೆ ಮರಳಿದ 'ಕ್ಯಾಥಿಕ್ರೋನ್'' ಎಂಬಾಕೆಯು ನೆನಪಿನಲ್ಲಿರಬಹುದು.

ಬಳ್ಳಾರಿಯ ಕೌಲ್ ಬಜಾರ್‌ನ ಪೇದೆಯೊಬ್ಬ, ಅತ್ಯಾಚಾರದ ಅಪರಾಧಕ್ಕಾಗಿ, ಬಂಧಿಸಲ್ಪಟ್ಟಾಗ, ಜನ

ದಂಗೆಎದ್ದು, ಐದು ಮಂದಿಯು ಸಾವು, ನೂರಾರು ಜನರು ಗಾಯ ಗೊಂಡರೂ, ಅಪರಾಧ ಪ್ರಾಸಿಕ್ಯೂಷ್ನ್, ಸಾಬೀತು ಮಾಡಿಲ್ಲವೆಂದು ಆರೋಪಿಯನ್ನು ಬಿಡುಗಡೆ ಮಾಡಲಾಯಿತು.

ಈ ಹೇಯವಾದ ಕಾರ್ಯಕ್ಕೆ ಮೂಲ ಕಾರಣಗಳೇನು? ಎಂದು ಯೋಚಿಸಿದಾಗ.

1) ಪುರುಷನ ಆಸ್ತಿಯಾಗಿ, ಸರಕಾಗಿ ಕಾಣಲ್ಪಡುವ ಹೆಣ್ಣಿನ ಸ್ಥಾನಮಾನ ಹೊಂದಿರುವ ನಮ್ಮ ಸಾಮಾಜಿಕ, ರಾಜಕೀಯ ವ್ಯವಸ್ಥೆ. ಗ್ರಾಮಾಂತರ ಪ್ರದೇಶಗಳಲ್ಲಂತೂ ಅತ್ಯಾಚಾರದ ಆಘಾತದಿಂದ ಸಾಪಪ್ಪಿದರೆ ಮಾತ್ರ ಪ್ರಕರಣ ಬೆಳಕಿಗೆ ಬರುವುದು. ಇಲ್ಲವಾದಲ್ಲಿ ಪ್ರಕರಣ ಮುಚ್ಚಿಹೋಗುತ್ತದೆ.

2) ಮೂಢನಂಬಿಕೆಗಳು—ಅಪ್ರಾಪ್ತ ವಯಸ್ಸಿನ ಬಾಲಕಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸಿದರೆ, 'ಗುಹ್ಯ ರೋಗಗಳು' ಹೋಗಬಹುದೆಂಬ ಮೂಢ ಕಲ್ಪನೆಗೇ ಎಷ್ಟೋ ಪುಟ್ಟ ಬಾಲಕಿಯರು ಬಲಿಯಾಗಿದ್ದಾರೆ; ಆಗುತ್ತಲೂ ಇದ್ದಾರೆ.

3) ಲೈಂಗಿಕ ಶಿಕ್ಷಣ ಇಲ್ಲದಿರುವುದು ಮತ್ತು ಅತೃಪ್ತ ಕಾಮಿಗಳ ವಿಕೃತ ಕಾಮಿಗಳಾಗಿ, ಈ ಅತ್ಯಾಚಾರಕ್ಕೆ ತೊಡಗುವುದು.

4) ಫುಟ್ ಪಾತಿನಮೇಲೆ, ಬಸ್‌ಸ್ಟ್ಯಾಂಡಿನ ನೆರಳ್ಳ ಗಳಲ್ಲೇ, ತಂದೆ-ತಾಯಿಗಳ್ಯಾರೆಂದು ತಿಳಿಯದೇ, ತಮಗಿಷ್ಟಬಂದಂತೆ ಬೆಳೆದ ಅನಾಥ ಮಕ್ಕಳು, ಹರೆಯಕ್ಕೆ ಬಂದಾಗ, ಉಂಡಾಡಿ ಗುಂಡರಾಗಿ, ಹದಿಹರೆಯದ ಯುವತಿಯರನ್ನು ಕಾಡುವುದರಲ್ಲಿ ನಿಪುಣರಾಗುತ್ತಾರೆ. ಸ್ಥಾನಮಾನದ, ಕಾನೂನಿನ, ಪೋಲಿಸ್ ಇಲಾಖೆಯ ಭಯ ವಿರದ ಇವರುಗಳಿಂದ ಸಾಮೂಹಿಕ ಅತ್ಯಾಚಾರದ ಸಂದರ್ಭಗಳಲ್ಲಿ, ಕೆಲವರು ಆಕ್ರಮಣದ ರಭಸಕ್ಕೆ, ಭಯ ದಿಂದಲೇ ಸಾಯಬಹುದು. ಕೆಲವರು ಅತಿಯಾದ ರಕ್ತ ಸ್ರಾವದಿಂದಲೂ ಸತ್ತರೆ, ಮತ್ತೆ ಕೆಲವರನ್ನು, ಮುಂದೆ ತಮ್ಮನ್ನು ಗುರುತಿಸಬಹುದೆಂಬ ಭಯದಿಂದ, ಕೊಂದು ಹಾಕಿ ಹೋಗಬಹುದು. ಇನ್ನೊಂದು ಗುಂಪಿನ ವಿಕೃತ ಕಾಮಿಗಳು, ಕೊಲೆಗೈದನಂತರವೂ, ಶವದೊಂದಿಗೂ ಲೈಂಗಿಕ ಕ್ರಿಯೆ ನಡೆಸಿರುವ ದಾಖಲೆಗಳಿವೆ.

ಇಂತಹ ಸಂದರ್ಭಗಳಲ್ಲಿ ಪೋಲಿಸರ ಸಹಾಯ ಅಪರಾಧವನ್ನು ಸಾಬೀತು ಮಾಡಲು ಅತ್ಯಂತ ಆವಶ್ಯ ಕರವಾದದ್ದು. ಅತ್ಯಾಚಾರದ ನಂತರ 24ಗಂಟೆಯೊಳಗೆ ಆಸ್ಪತ್ರೆಗೆ ಕರೆದು ತಂದರೆ, ಕೂಲಂಕುಷವಾದ ಪರೀಕ್ಷೆಯ ನಂತರ, ಅಂದರೆ, ಹಲ್ಲೆಗೊಳಗಾದ ಯುವತಿಯ ಗುಪ್ತಾಂಗಗಳಲ್ಲಿರುವ ವೀರ್ಯಾಣುಗಳಿಂದ, ಆ ಸಮಯ ದಲ್ಲಿ ಧರಿಸಿದ ಬಟ್ಟೆಗಳನ್ನು ಕಳಚಿ, 'ಸೀಲ್'ಮಾಡಿ, ಮತ್ತೊಮ್ಮೆ ಪರೀಕ್ಷೆಗೊಳಪಡಿಸುವುದರಿಂದ ತಿಳಿಯ ಬಹುದು. 'ಅತ್ಯಾಚಾರ' ನಡೆಸಿ ಹಿಂಸಿಸಿದರೆ ಮಾತ್ರ ಶಿಕ್ಷೆಯಾಗುತ್ತದೆಂಬುದಲ್ಲ. 'ಅತ್ಯಾಚಾರ'ಕ್ಕೆ ಪ್ರಯತ್ನ ಮಾಡಿ, ಹೆಣ್ಣಿಗೆ ಮಾನಸಿಕ ಆಘಾತವನ್ನು ತಂದಿದ್ದರೂ, "attempted Rape" ಎಂದು, ಸೆಕ್ಷನ್ 354 ಪ್ರಕಾರ ಶಿಕ್ಷಿಸಬಹುದು. (ಇಂಡಿಯನ್ ಪೀನಲ್ ಕೋಡ್ ಪ್ರಕಾರ)

ಇಂತಹ ಅಪರಾಧಗಳನ್ನು ಗುರುತಿಸುವಲ್ಲಿ ಈ ಮೂರು ಇಲಾಖೆಗಳು ಪ್ರಮುಖ ಪಾತ್ರ ವಹಿಸುತ್ತದೆ.

1) ವೈದ್ಯಕೀಯ, 2) ಪೋಲಿಸ್, 3) ಕಾನೂನು.

ವೈದ್ಯಕೀಯ ಇಲಾಖೆಯಿಂದ, ಅಪರಾಧಿ ಯಾರೆಂದು ತಿಳಿಯದಿದ್ದರೂ, ಹಿಂಸೆಗೆ, ಕ್ರೌರ್ಯಕ್ಕೆ, ಸಾವಿಗೀಡಾದ ವ್ಯಕ್ತಿಯ ಸಾವಿನ ಬಗ್ಗೆ ಖಚಿತವಾದ ಕಾರಣ, ಅಭಿಪ್ರಾಯವನ್ನು ಪಡೆಯಬಹುದು. ಅದನ್ನು ಪೋಲಿಸ್ ಇಲಾಖೆಗೆ ಕಳುಹಿಸಲಾಗುತ್ತದೆ. ವೈದ್ಯಕೀಯದ ಅಭಿಪ್ರಾಯ ತಿಳಿದರೂ, 'ಅಪರಾಧಿ'ಯನ್ನು "ಸಂಶಯಾಸ್ಪದ" ವ್ಯಕ್ತಿಯೆಂದು ತಿಳಿದು, ತನಿಖೆಗೊಳ ಪಡಿಸಿದ ನಂತರವೇ ಅಪರಾಧಿಯೆಂಬ ತೀರ್ಮಾನಕ್ಕೆ ಬಂದ ನಂತರ, ಕಾನೂನಿನ ಕೈಗೆ ಒಪ್ಪಿಸಲಾಗುತ್ತದೆ. ಇಲ್ಲಿ ಅಪರಾಧಿಯ ಬಲಾಬಲಗಳಿಗೆ ಒಮ್ಮೊಮ್ಮೆ ತೀರ್ಪು, ನ್ಯಾಯ ಸಿಗುತ್ತದೆ. ಜೀವಭಯದಿಂದ, ತಮ್ಮ ಮೊರೆ ಹೊಕ್ಕವರನ್ನು ಉಳಿಸುವುದು, ತಮ್ಮ ವೃತ್ತಿ ಧರ್ಮ ವೆಂದಿರಬಹುದೋ ಏನೋ? ಕಾನೂನಿನ ಕೈಗೆ ಸಿಕ್ಕ ನಂತರ, ಇಡೀ ಚಿತ್ರಣವೇ ಬದಲಾಗುವ ಸಾಧ್ಯತೆಗಳಿರು ತ್ತವೆ. ಹಣ, ಪ್ರಭಾವವಿದ್ದವನು ತಾನು ನಿರಪರಾಧಿ ಯೆಂದು ಸಾಬೀತು ಪಡಿಸುವಲ್ಲಿ ಯಶಸ್ವಿಯಾಗಬಹುದು.

ವೈದ್ಯಕೀಯ ಇಲಾಖೆ, ಮಹತ್ವದ ಪಾತ್ರವನ್ನು ವಹಿಸುವುದೇನೋ ನಿಜ. ಆದರೆ ಕೆಲವು ಸಂದರ್ಭಗಳಲ್ಲಿ ಕಾನೂನಿಗೆ, ಪೋಲಿಸ್ ಇಲಾಖೆಗೆ, ಸಹಾಯಕವಾಗುವಂತೆ ಸಹಕರಿಸಬೇಕಾಗಿಬಂದ ಸಂದರ್ಭಗಳಲ್ಲಿ ಕೆಲವರು, ಸಹಕಾರ ನೀಡದೆ ಇರಬಹುದು. ಅದಕ್ಕೆ ಕಾರಣಗಳಿರು ತ್ತವೆ.

1) ಪ್ರತಿ ಮೂರು, ನಾಲ್ಕು ವರ್ಷಕ್ಕೊಮ್ಮೆ, ಊರಿಂದ ಊರಿಗೆ, ವರ್ಗವಾಗುತ್ತಾ, ಬದುಕುವ ವೈದ್ಯರು ಆಯಾ ಊರಿಗೆ ಹೊಸಬರೇ ಆಗಿರುತ್ತಾರೆ. ಆತ್ಮೀಯತೆ, ವಿಶ್ವಾಸ ಬೆಳೆಸಿಕೊಂಡಿದ್ದರೂ ಇಂತಹ ಸಂದರ್ಭಗಳು ಬಂದಾಗ ಅಲ್ಲಿನ ಜನರಿಂದ ವೈದ್ಯರಿಗೆ ಸಹಕಾರ ಸಿಗದೇ ಇರಬಹುದು.

2) ಸರ್ಕಾರಿ ವೃತ್ತಿಯಲ್ಲಿದ್ದುದರಿಂದ, ರಾಜಕೀಯದ ಉದ್ದವಾದ ಕೈಗಳು, ತಮ್ಮ ಹೊಟ್ಟೆಯಮೇಲೆ ಹೊಡೆಯುವ ಭಯದಿಂದಿರಬಹುದು.

3) ಕೊಲೆಯ ಪ್ರಕರಣ ಬಂದಾಗ, ಪೋಸ್ಟ್ ಮಾರ್ಟಂ ಮಾಡಿ ರಿಪೋರ್ಟ್ ನೀಡುವಾಗ, ವಿರುದ್ಧ ಪಾರ್ಟಿಯವರಿಂದ ಜೀವ ಭಯದ, ಬೆದರಿಕೆ, ಅಥವಾ ಸೇಡಿಗಾಗಿ ತನ್ನ ಕುಟುಂಬವನ್ನು ಹಿಂಸಿಸಬಹುದೆಂಬ ಭಯದಿಂದಲೂ ಇರಬಹುದು.

4) ಕೆಲವೊಮ್ಮೆ, ಹಣದ ಆಮಿಷ, ರಾಜಕೀಯದ ಪ್ರಭಾವಕ್ಕೆ ಒಳಗಾಗಬಹುದರಿಂದಲೂ ಇರಬಹುದು.

ಇಂತಹ ಸಂದರ್ಭಗಳಲ್ಲಿ, ಖಚಿತವಾದ ಅಭಿಪ್ರಾಯವನ್ನು ನೀಡದೇ ಅಪರಾಧಿಯು ಬಿಡುಗಡೆ ಹೊಂದುವಲ್ಲಿ ಶಿಕ್ಷೆಯಿಂದ, ತಪ್ಪಿಸಿಕೊಳ್ಳುವುದಕ್ಕೆ ಕಾರಣವಾಗಬಹುದು.

ಎಲ್ಲಾ ವೈದ್ಯರುಗಳು ಹೀಗೆಯೇ ಇರುತ್ತಾರೆಂದಲ್ಲ. ಇರುವುದೂ ಇಲ್ಲ. ಈ ನಿಟ್ಟನಲ್ಲಿ ತಮ್ಮ ಮಹತ್ವದ ಪಾತ್ರವನ್ನರಿತು, ನಿರ್ಭಯದಿಂದ ಯಾವ ಆಸೆ ಆಮಿಷಗಳಿಗೂ ಬಗ್ಗದೇ ತಮ್ಮ ಅಭಿಪ್ರಾಯನ್ನು ಕಾನೂನಿನವರೆಗೂ ಹೋಗುವಂತೆ ಮಾಡಿದಾಗ, ಆ ವ್ಯಕ್ತಿ, ಕಾನೂನಿನ ಸಹಾಯದಿಂದ ಬಿಡುಗಡೆಯಾಗಿ ಬಂದು ತಮ್ಮ 'ಅಭಿಪ್ರಾಯ'ಕ್ಕೆ ಬೆಲೆ ಬಾರದೇ, ಸೋಲುತ್ತಿರುವುದನ್ನು ಕಂಡು ಖಿನ್ನರಾಗಿರುವವರು ಇದ್ದಾರೆ. ಇದು ನನ್ನ ಸ್ವಂತ ಅನುಭವವೂ ಹೌದು.

ದುಷ್ಕೃತ್ಯಗಳಿಂದ ಆಕ್ರಮಣ, ಹಲ್ಲೆ ಮಾಡಿ, ಮಹಿಳೆಯನ್ನು ಹಿಂಸಿಸುವ ಕೊಲ್ಲುವ ವ್ಯಕ್ತಿಗಳಿಗೆ ನ್ಯಾಯವಾಗಿ ಶಿಕ್ಷೆಯಾದಲ್ಲಿ, ಖಂಡಿತವಾಗಿಯೂ ಭೀತಿ ಹುಟ್ಟಿ ಈ ವಿಧದ ಬರ್ಬರ ಘಟನೆಗಳು ಕಡಿಮೆಯಾಗಬಹುದು.

ಎಲ್ಲದಕ್ಕೂ ಮೊದಲು ನಮ್ಮ ಈ ವ್ಯವಸ್ಥೆ ಬದಲಾಗಬೇಕು. ವಿವಾಹ ಪದ್ಧತಿಯು ಬದಲಾಗಿ ಹೆಚ್ಚಾಗಿ ಅಂತರ್ ಜಾತಿಯ ವಿವಾಹಗಳು ಹೆಚ್ಚಬೇಕು. ಹಾಗೂ ವಿವಾಹ ಸಂಸ್ಥೆ ವ್ಯಾಪಾರಿ ಮೌಲ್ಯಗಳಿಂದ ಮುಕ್ತವಾಗಬೇಕು. ಒಳ್ಳೆಯ ಶಿಕ್ಷಣ ಹೊಂದಿದ, ವೃತ್ತಿನಿರತ ಮಹಿಳೆಯರಲ್ಲಿ ಈ ದೌರ್ಜನ್ಯದ ಅಪಾಯದ ಅಂಶಗಳು, ಅವಿದ್ಯಾವಂತ ನಿರುದ್ಯೋಗಿ ಮಹಿಳೆಗೆ ಹೋಲಿಸಿದಾಗ ತುಂಬಾ ಕಡಿಮೆ. ಇದಕ್ಕಾಗಿ ಶಿಕ್ಷಣದ ಅವಶ್ಯಕತೆ ಬಹಳ ಹೆಚ್ಚಾಗಬೇಕಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ, ವೃತ್ತಿಯಲ್ಲಿ, ಮಹಿಳೆಗೆಂದು ಕೆಲವು ಸ್ಥಾನಗಳನ್ನು, ಹೆಚ್ಚಾಗಿಯೇ ಮೀಸಲಿಡಬೇಕು. ಮಹಿಳೆಯು ಸ್ವಸಾಮರ್ಥ್ಯವನ್ನೂ, ವ್ಯವಸ್ಥೆಯ ವಿರುದ್ಧ ಹೋರಾಡುವ ಶಕ್ತಿ, ಸ್ಫೂರ್ತಿಯನ್ನು ಹೊಂದಿರಬೇಕು; ಬೆಳೆಯಿಸಿಕೊಳ್ಳಬೇಕು. ದೌರ್ಜನ್ಯಗಳು ಯಾವ ಮಟ್ಟದಲ್ಲಿ, ಯಾರಿಗೇ ಆಗುತ್ತಿರಲಿ, ನಿರ್ಭಿಡೆಯಿಂದ ಖಂಡಿಸಿ, ಹೇಳುವಷ್ಟು ಧೈರ್ಯವಂತೆಯಾಗಬೇಕು.

ಒಗ್ಗೂಡಿಸುವ ಧ್ವನಿಗಳು

ಸಮಾಜಕ್ಕೆ ಮಹಿಳೆಯರ ಕೊಡುಗೆ ಮತ್ತು ಸಮಾಜದ ಸೊತ್ತಿನಲ್ಲಿ ಅವರ ಪಾಲೆಷ್ಟು ಎಂಬ ಬಗ್ಗೆ ಅಂಕಿ-ಅಂಶಗಳು ಸಿಗುವುದೇ ಕಷ್ಟ. ದೊರೆತಾಗ ಅವು ನೀಡುವ ಚಿತ್ರವಂತೂ ಅವರ್ಣನೀಯ. ವಿಶ್ವದಲ್ಲಿ ಮಹಿಳೆಯರ ಸ್ಥಾನದ ಬಗ್ಗೆ ಇರುವ ಸಾಮಾನ್ಯ ಭಾವನೆಯನ್ನು ಅದು ಮರೆಮಾಡುತ್ತದೆ. ಸಮಾಜದ ಈ ಅರ್ಧ ಭಾಗದಷ್ಟು ಜನರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಅವರ ಪಾತ್ರವೇನೆಂದು ಚರ್ಚೆ ನಡೆಯುತ್ತಲೇ ಇರುತ್ತದೆ. ಈ ಮಹಿಳೆಯರೇ ಕುಟುಂಬವನ್ನು ನಡೆಸಿಕೊಂಡು ಹೋಗುತ್ತಾರೆ; ಮನೆಮಂದಿಯ ಆರೋಗ್ಯದ ಮೇಲ್ವಿಚಾರಣೆ ಹಾಗೂ ಆಹಾರ ಒದಗಿಸುವ ಗುರುತರ ಕೆಲಸವನ್ನು ನಿರ್ವಹಿಸುತ್ತಾರೆ. ಗೃಹ ಹಾಗೂ ರಾಷ್ಟ್ರೀಯ ವರಮಾನಕ್ಕೆ ಕೂಡ ಅವರು ಗಮನಾರ್ಹ ಕೊಡುಗೆ ನೀಡುತ್ತಿದ್ದಾರೆ.

ಇಂದಿನ ಮಹಿಳೆ, ಮುಖ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಸ್ತ್ರೀಯರ ಬಗೆಗೆ ಯೋಚಿಸುವಾಗ ದೌರ್ಜನ್ಯವೇ ನಮ್ಮ ಕಣ್ಣಮುಂದೆ ನಿಂತೇ ನಿಲ್ಲುತ್ತದೆ. ಆದರೂ

ಮಹಿಳೆಯರ ಕೊಡುಗೆ ಶ್ಲಾಘನೀಯವಾಗೇ ಇದೆ. ಆಫ್ರಿಕಾದಲ್ಲಿಯೇ ನೋಡಿ, ಅವರು ಕೃಷಿ ಕಾರ್ಯದ ಶೇಕಡ 60ರಷ್ಟು ಕೆಲಸವನ್ನು ನಿರ್ವಹಿಸುತ್ತಾರೆ. ಪಶು ಸಂಗೋಪನೆಯ ಶೇಕಡ 50ರಷ್ಟು ಕೆಲಸ ಅವರ ಹೆಗಲಿಗೇ. ಆಹಾರ ಸಂಸ್ಕರಣೆಯಂತೂ ಪೂರ್ಣವಾಗಿ ಇವರದೇ.

ತಾಂಜನಿಯದಲ್ಲಿ ಕೃಷಿಯಲ್ಲಿ ಪ್ರತಿವರ್ಷ ಸರಾಸರಿ 2600 ಗಂಟೆಗಳ ಕಾಲ ಮಹಿಳೆಯರು ಕೆಲಸ ಮಾಡಿದರೆ ಪುರುಷರು ಸರಾಸರಿ 1800 ಗಂಟೆ ಕೆಲಸ ಮಾಡುತ್ತಾರೆ. ಆದರೆ ಅವರ ಈ ಕೆಲಸ ಗಣನೆಗೇ ಬಾರದೆ ಹೋಗುತ್ತದೆ. ಆದುದರಿಂದ ಅಧಿಕೃತವಾಗಿ ಮಹಿಳೆಯರ ಕೆಲಸದ ಪಾಲು ತೀರಾ ಕಡಿಮೆ. ಆದರೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸ್ವಲ್ಪ ಭಿನ್ನವಾದ ಚಿತ್ರವನ್ನು ನೋಡಬಹುದು. ಜಾಗತಿಕ ಸಮರದ ನಂತರದ ಸಾಮಾಜಿಕ —ಆರ್ಥಿಕ ದಿಗ್ಸೂಚಿಯು ಮಹಿಳೆಯರು ದುಡಿಯುವ ರಂಗ ಪ್ರವೇಶಿಸಿರುವುದನ್ನು ಸ್ಪಷ್ಟಪಡಿಸಿರುವುದಲ್ಲದೆ ಅಧಿಕೃತ ಅಂಕಿ ಸಂಖ್ಯೆಯಲ್ಲಿಯೂ ಅವರು ಕಾಣಿಸಿಕೊಂಡಿರುವುದು ಗಮನಾರ್ಹ. ಅಮೆರಿಕ, ಬ್ರಿಟನ್ ಹಾಗೂ ಜಪಾನಿನಲ್ಲಿ ಒಟ್ಟು ದುಡಿಮೆ ಶಕ್ತಿಯಲ್ಲಿ ಶೇಕಡ 40ರಷ್ಟು ಮಹಿಳೆಯರು ಎಂಬುದು ಗಮನಾರ್ಹ. ಆದರೆ ಮನೆಯಲ್ಲಿ ವೇತನ ಇಲ್ಲದೆ "ಅದೃಶ್ಯ" ಕೆಲಸ ಮಾಡುವ ಮಹಿಳೆಯರ ದುಡಿಮೆ ಇಂದಿಗೂ ಮನ್ನಣೆ ಪಡೆದಿಲ್ಲ.

ದುಡಿಮೆಗೆ ವೇತನ ದೊರಕುವ ಕೆಲಸವನ್ನು ಗಮನಿಸಿದರೆ, ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರು ಪಕ್ಷಪಾತವನ್ನು ಎದುರಿಸಬೇಕಾಗಿದೆ. ಮಹಿಳಾ ಕಾರ್ಮಿಕರನ್ನು ಅತಿ ಕಡಿಮೆ ಕೂಲಿಗೆ ಸಿಗುವ ದುಡಿಮೆಗಾರರೆಂದು ಪರಿಗಣಿಸಲಾಗಿದೆ. ಇಲ್ಲಿ ಎರಡು ಮುಖ್ಯ ಸಮಸ್ಯೆ ಇದೆ: ಮಹಿಳೆಯರು ಅತಿ ಕಡಿಮೆ ವೇತನದ ಕೆಲಸವನ್ನು ನಿರ್ವಾಹವಿಲ್ಲದೆ ಒಪ್ಪಿಕೊಂಡುಬಿಡುತ್ತಾರೆ. ಅಥವಾ ಸಾಂಪ್ರದಾಯಿಕ ಕೆಲಸಗಳಿಗಿಂತ ಬೇರೆ ವೃತ್ತಿ ಆರಿಸಿಕೊಂಡರೆ ಸಮಾನ ವೇತನ ದೊರೆಯುವುದಿಲ್ಲ. ಬ್ರಿಟನ್ನಿನಲ್ಲಿ ಪುರುಷ ಕಾರ್ಮಿಕರಿಗಿಂತ ಮಹಿಳಾ ಕಾರ್ಮಿಕರಿಗೆ ಶೇಕಡ 25 ಕಡಿಮೆ ಕೂಲಿ ಸಿಗುತ್ತದೆ. ಅಮೆರಿಕದ ಮಹಿಳೆಯರಿಗೆ ಶೇಕಡ 40ರಷ್ಟು ಕಡಿಮೆ ವೇತನ ದೊರೆಯುತ್ತದೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರ ಅನಕ್ಷರತೆ ಮತ್ತೊಂದು ರೀತಿಯ ಸಮಸ್ಯೆಯನ್ನು ಉಂಟುಮಾಡಿದೆ. ಮೂರು ಮಹಿಳೆಯರಲ್ಲಿ ಇಬ್ಬರು ಅನಕ್ಷರಸ್ಥರು. ದಾರಿದ್ರ್ಯ ಮತ್ತು ಅಪೌಷ್ಟಿಕಾಂಶವನ್ನು ಅನಕ್ಷರತೆಗೆ ಆರ್ಥಿಕ ಕಾರಣಗಳನ್ನಾಗಿ ಹೇಳಲಾಗುತ್ತದೆ.

ಮಾನವೀಯತೆ

ರಾಜಕೀಯದಲ್ಲಿ ಇಂದಿಗೂ ಮಹಿಳೆಯರ ಸಂಖ್ಯೆ ಕಡಿಮೆಯೇ. ಆದರೆ ಅವರ ಧ್ವನಿ ಕೇಳಿಬರುತ್ತದೆ. ಹಾಗೆಂದು ನಿಜವಾದ ರಾಜಕಾರಣದಲ್ಲಿ ಅಥವಾ ಅಧಿಕಾರ ರಾಜಕೀಯದಲ್ಲಿ ಅವರ ಧ್ವನಿ ಮಾತ್ರ ಇಲ್ಲ. ಶಾಂತಿ ಮತ್ತು ಸಂಘರ್ಷವಿರದ ಸಾಮಾನ್ಯ ಜನ ಜೀವನದಲ್ಲಿ ಮಾತ್ರ ಅವರ ಧ್ವನಿ ಕೇಳಿಬರುತ್ತದೆ. ಆದರೆ ಕುಟುಂಬದ ಭವಿಷ್ಯ ಮತ್ತು ಘನತೆ–ಆತ್ಮಗೌರವದ ವಿಚಾರದಲ್ಲಿ ಮೂಡಿಬರುವ ಅವರ ಧ್ವನಿ ಎಲ್ಲ ಅಧಿಕಾರ ರಾಜಕಾರಣದ ಗುಣಮಟ್ಟವನ್ನು ಮೀರಿ ನಡೆಯುತ್ತದೆ. ಆದುದರಿಂದ ಮಹಿಳೆಯರ ಧ್ವನಿಯು ಮಾನವೀಯತೆಯ ಧ್ವನಿ.

ಭಾರ್ಗವಿ ನಾಗರಾಜ್

ಸಮಕಾಲೀನ ಮಹಿಳಾ ಆಂದೋಲನದಲ್ಲಿ ನೂರಾರು ಅಂತರರಾಷ್ಟ್ರೀಯ ಸಂಘಟನೆ ಹಾಗೂ ಸಹಸ್ರಾರು ಒತ್ತಡ ಗುಂಪುಗಳಿವೆ. ಇದನ್ನು 1970 ಮತ್ತು 1980ರ ದಶಕದ ವಿಶ್ವದ ಸಾಮಾಜಿಕ ಆಂದೋಲನವೆಂದು ಕರೆಯಬಹುದು. ಸಂಘಟಿತರಾಗಿ ಮಹಿಳೆಯರು ಧ್ವನಿ ಏರಿಸುವುದನ್ನು ಅರ್ಥಮಾಡಿಕೊಂಡಿದ್ದಾರೆ. ಗ್ರೀನ್ ಹ್ಯಾಮ್ ಕಾಮನ್: ಬ್ರಿಟನ್ (1981) ಹಾಗೂ ಭಾರತದಲ್ಲಿ ಚಿಪ್ಕೊ ಆಂದೋಲನದಂಥ ಶಾಂತಿ ಚಳವಳಿಗಳು ವಿಶ್ವ ಮಾನ್ಯತೆ ಪಡೆದಿವೆ.

ನಿಜಸ್ಥಿತಿ

ನೈಜ ಪರಿಸ್ಥಿತಿಯನ್ನು ಗಮನಿಸೋಣ. ಮಹಿಳೆಯರು ಸಂಘಟಿತರಾಗಿ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ, ನಿಜ. ಆದರೆ ನಿರ್ಧಾರ ಕೈಗೊಳ್ಳುವ ಎಲ್ಲ ಮಟ್ಟದಲ್ಲಿಯೂ ಮಹಿಳೆಯರ ಪ್ರಾತಿನಿಧ್ಯ ಸಾಕಷ್ಟು ಇಲ್ಲ. ವಿಶ್ವದ ಯಾವುದೇ ರಾಷ್ಟ್ರದಲ್ಲಿ ಅದರ ಶಾಸಕಾಂಗದಲ್ಲಿ

ಶೇಕಡ 50 : 50ರ ಪ್ರಮಾಣದ ಸ್ಥಾನಗಳಿಲ್ಲ. ಇಂದಿಗೂ ಅನೇಕ ರಾಷ್ಟ್ರಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ಇಲ್ಲ.

ರಾಜಕೀಯ ಅಧಿಕಾರ ಹಾಗೂ ದುಡಿಮೆಯಿಂದ ಗಳಿಸುವುದರಲ್ಲಿ ಪುರುಷರ ಜತೆ ಸಮಪಾಲು ಸಾಧಿಸುವುದು ಸರಳವಾದ ವಿಚಾರವಲ್ಲ. ಇದು ಪುರುಷ ಪ್ರಧಾನ ಸಂಸ್ಕೃತಿ ಮೇಲೆ ಪ್ರಹಾರ ಹಾಕಿದಂತೆ. ಆದರೆ ಮಹಿಳೆಯರು ಇದಕ್ಕೆ ಹಿಮ್ಮೆಟ್ಟಿಲ್ಲ. ದುಡಿಮೆ ಹಾಗೂ ರಾಜಕೀಯ ರಂಗಗಳಲ್ಲಿ ಪಾತ್ರವಹಿಸಿ ಸಮಾನತೆಗಾಗಿ ಹೋರಾಟ ನಡೆಸಿದ್ದಾರೆ.

ಮಹಿಳಾ ದುಡಿಮೆ ಸಮಯ, ವರಮಾನ ಮತ್ತು ಮಾಲಿಕತ್ವದ ನಡುವಣ ಅಸಮತೋಲನವನ್ನು ವಿಶ್ವ ಸಂಸ್ಥೆ ಮಹಿಳಾ ದಶಕದಲ್ಲಿ ದಾಖಲು ಮಾಡಿಕೊಳ್ಳಲಾಗಿದೆ. ಮಹಿಳಾ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದ್ದರೂ ಈ ಅಸಮತೋಲನ ಕಣ್ಣಿಗೆ ರಾಚುವಂತಿದೆ. ಸಮಾನ ವೇತನ ಕಾನೂನುಗಳನ್ನು ತೀವ್ರವಾಗಿ ಜಾರಿಗೊಳಿಸಬೇಕಾಗಿದೆ.

ಮತ್ತೊಂದು ಗುರಿ ಎಂದರೆ ಮನೆ ಕೆಲಸವನ್ನು ಹಂಚಿಕೊಳ್ಳುವುದು.

ಧಾರ್ಮಿಕ ಮತಾಂಧತೆ ಇರುವ ದೇಶಗಳಲ್ಲಿ ಅವುಗಳದೇ ಆದ ರೀತಿಯಲ್ಲಿ ಕಾರ್ಯ ನಿರ್ವಹಣೆ ಕಂಡು ಬರುತ್ತದೆ. ಇಲ್ಲಿ ಮಹಿಳೆಯರ ಸಂಚಾರ, ಶಿಕ್ಷಣ ಮತ್ತು ಉದ್ಯೋಗ ಅವಕಾಶದ ಮೇಲೆ ತೀವ್ರ ಹಿಡಿತ ಇರುತ್ತದೆ.

ರಾಜಕೀಯದಲ್ಲಿ, ಶಾಂತಿಗಾಗಿ, ಮಹಿಳೆಯರು ಪಾಲ್ಗೊಳ್ಳುವ ವಿಚಾರ ಈಗಾಗಲೇ ಗಮನಿಸಿದ್ದೇವೆ. ಭಯೋತ್ಪಾದನೆ, ಅರಾಜಕತೆ, ಸಶಸ್ತ್ರ ಘರ್ಷಣೆ, ಸಮರ ಭೀತಿ ಇವುಗಳ ವಿರುದ್ಧ ಮಹಿಳೆಯರು ಧ್ವನಿ ಏರಿಸಿದ್ದಾರೆ. ಅಂದರೆ ಅತ್ಯಂತ ಮಾನವೀಯ ರೀತಿಯಲ್ಲಿ, ಮಾನವೀಯ ಕಾರಣಗಳಿಗಾಗಿ, ಚಿಲಿ, ಅರ್ಜೆಂಟೀನ, ಬ್ರಿಟನ್‌ಗಳಲ್ಲಿ ನಡೆದ ಪ್ರತಿಭಟನಾ ಪ್ರದರ್ಶನಗಳಲ್ಲಿ ಹಿಂಸೆಯ ಛಾಯೆ ಕೂಡ ಇರಲಿಲ್ಲ. ಎಲ್ಲಾ ಅಹಿಂಸಾತ್ಮಕ ಚಳವಳಿಗಳು.

ಧೋರಣೆ

ಒಟ್ಟಾರೆ ಮಹಿಳೆಯರನ್ನು ಕುರಿತ ಧೋರಣೆ ಬದಲಾಗಬೇಕಾಗಿದೆ. ಮುಖ್ಯವಾಗಿ ಮೂರನೇ ವಿಶ್ವದಲ್ಲಿ ಧೋರಣೆ ಹೇಗಿದೆ ಎಂದರೆ ಬಾಲಕಿಯರು ಮತ್ತು ಮಹಿಳೆಯರು ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕಾಂಶದತ್ತ ಸುಲಭವಾಗಿ ದಾಪುಗಾಲು ಹಾಕುವುದು ಸಾಧ್ಯವಿಲ್ಲ. ಆದುದರಿಂದ ಅವರು ಪೂರ್ಣ ವ್ಯಕ್ತಿಯಾಗಿ ಬೆಳೆಯುವುದು ಕಷ್ಟಕರ. ಅದಕ್ಕೆ ಪೂರಕವಾದ ವಾತಾವರಣ ಇರುವುದಿಲ್ಲ.

ರಾಜಕೀಯಗೊಳಿಸು

'ಮಹಿಳೆಯನ್ನು ರಾಜಕೀಯಗೊಳಿಸು' ಎಂದರೆ ಏನು? ಅರ್ಥವ್ಯವಸ್ಥೆಯಲ್ಲಿ ಮಹಿಳೆಯರ ಹಿತಾಸಕ್ತಿಯನ್ನು ಅದು ಸೂಚಿಸುವುದಿಲ್ಲ. ಅಥವಾ ಚುನಾವಣೆ ಗೆಲ್ಲಲು ಅದನ್ನು ಬಳಸಿಕೊಳ್ಳಬೇಕೆಂದು ಅದು ಹೇಳುವುದಿಲ್ಲ. 'ರಾಜಕೀಯಗೊಳಿಸು'ವ ವಿಚಾರ ಅದಕ್ಕೂ ಹೆಚ್ಚಿನದಾಗಿದೆ. ಮಹಿಳೆಯರನ್ನು ಕುರಿತ ನೀತಿಗಳಿಂದಲೇ ಯಾವುದೇ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲ ಅಥವಾ ಸರ್ಕಾರ ಉರುಳುವುದಿಲ್ಲ. ಅವರ ನೈಜ ಬದುಕಿನ ಆಶಯ ಮತ್ತು ಆಶೋತ್ತರ, ಗುರಿ ಮತ್ತು ಯಶಸ್ಸು ಇವುಗಳನ್ನು ನನಸಾಗಿಸುವುದೇ ಮಹಿಳೆಯನ್ನು ನಿಜವಾಗಿ ರಾಜಕೀಯಗೊಳಿಸುವುದು. ಇವುಗಳ ಪೂರೈಕೆಗಾಗಿ ರೂಪಿಸುವ ಹಕ್ಕುಗಳೇ ಅದಕ್ಕೆ ಪೂರಕವಾದ ಅಂಶವಾಗುತ್ತದೆ. ಅದನ್ನು ಬೆಳೆಯಗೊಡಬಹುದು. ಅಥವಾ ಧ್ವಂಸ ಮಾಡಿಬಿಡಬಹುದು. ಇದೇ ರಾಜಕೀಯಗೊಳಿಸುವ ವಿಚಾರ.

ವಿವಿಧ ಶಕ್ತಿಗಳ ಬಗೆಗೆ ಮಹಿಳೆಯರಿಗೆ ಅರಿವು ಇಲ್ಲದಿರುವುದು ಅತ್ಯಂತ ದುಃಖದ ವಿಚಾರವಾಗಿದೆ. ವಿದ್ಯಾವಂತರಾಗಿದ್ದರೂ, ತಮ್ಮ ವಿರುದ್ಧದ ಈ ಶಕ್ತಿಗಳನ್ನು ಅವರು ಗುರುತಿಸುವುದಿಲ್ಲ. ಇನ್ನು ಪ್ರತಿರೋಧವೆಲ್ಲಿಂದ ಬರುತ್ತದೆ? ಇಂಥ ಸಾಮಾಜಿಕ ಪರಿಸ್ಥಿತಿ ಶತಶತಮಾನಗಳಿಂದಲೂ ಇದೆ. ಪುರುಷ ಪ್ರಧಾನ ಚಿಂತನೆಗಳು ಸುಲಭವಾಗಿ ಪ್ರಗತಿಪರ ಚಿಂತನೆಗೆ ಸ್ಥಳ ನೀಡುತ್ತವೆಯೆ ? ದೃಢವಾದ ಪ್ರತಿರೋಧವಿಲ್ಲದೆ ನಿರ್ಧಾರ ಕೈಗೊಳ್ಳುವ ಅಥವಾ ನೀತಿ ನಿರೂಪಣೆಗೆ ಅವಕಾಶ ಸಿಗುವುದು ಸಾಧ್ಯವಿಲ್ಲ.

ಮನ್ನಣೆ ಇಲ್ಲ

ಇಂದಿನ ಉದ್ಯೋಗ ಪರಿಸರದ ಜತೆ ಈ ಮೇಲಿನ ವಿಚಾರವನ್ನು ಗಮನಿಸೋಣ. ಹಳ್ಳಿ ಅಥವಾ ಪಟ್ಟಣ ಎಲ್ಲೇ ಆಗಲಿ, ಮಹಿಳೆಯರು ಮನೆಗೆ ಆರ್ಥಿಕ ನೆರವು

ನೀಡುವ ದುಡಿಮೆ ರಂಗದಲ್ಲಿದ್ದರೆ ಕುಟುಂಬಕ್ಕೆ ಹೆಚ್ಚಿನ ಸೌಲಭ್ಯ ಸಿಗಲೆಂದು ಸಮನಾಗಿ ದುಡಿಯುತ್ತಾರೆ. ಜತೆಗೆ ಇಡೀ ಕುಟುಂಬದ ಕೆಲಸ ಕಾರ್ಯದ ಜವಾಬ್ದಾರಿ, ಎಷ್ಟೋ ಬಾರಿ, ಪುರುಷರು ನಿರುದ್ಯೋಗಿಗಳಾದರೆ ಅವರೇ ಮನೆ ನಿರ್ವಹಣೆಯನ್ನು ಪೂರ್ಣವಾಗಿ ವಹಿಸಿ ಕೊಳ್ಳುತ್ತಾರೆ. ಅದರೂ ಮನೆಯ ಬಜೆಟ್‌ನಲ್ಲಿ, ಆಸ್ತಿಯಲ್ಲಿ, ಅವರಿಗೆ ಧ್ವನಿ ಇಲ್ಲ, ಜತೆಗೆ ಆರ್ಥಿಕ ಸ್ಥಾನಮಾನ ಕೂಡ ಇರುವುದಿಲ್ಲ. ಏಕೆಂದರೆ ಬಹಳಷ್ಟು ದುಡಿಯುವ ಮಹಿಳೆಯರು ಬ್ಯಾಂಕಿನಲ್ಲಿ ಉಳಿತಾಯ ಮಾಡಲಾರರು. ಕುಟುಂಬಕ್ಕೆ ಎಲ್ಲವನ್ನು ಹಾಕಿಬಿಡುತ್ತಾರೆ.

ಮುಖ್ಯವಾಗಿ ಗಳಿಸುವವರು ಪುರುಷರು; ಮಹಿಳೆಯರ ದುಡಿಮೆ ಗೌಣ ಎಂಬುದು ತೀರಾ ವಿಪರೀತವಾದ ರಾಜಕೀಯ ಹೇಳಿಕೆ.

ಅಂಥ ಅಭಿಪ್ರಾಯಗಳೇಕೆ ಅಷ್ಟೊಂದು ಪ್ರಭಲವಾಗಿವೆ? ಏಕೆಂದರೆ ಅವು ಮಾತಿಗಿಂತ ಕೃತಿಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅವು ಮಹಿಳೆ ಒಂದು ವರ್ಗ, ವ್ಯಕ್ತಿ ಮತ್ತು ಪೀಳಿಗೆ ಎಂಬ ಆಶಯದ ಮೇಲೆಯೇ ನಿರ್ಬಂಧ ಹೇರುತ್ತವೆ. ಇಡೀ ವಿಧಾನವು ವ್ಯವಸ್ಥೆಯಲ್ಲಿ ಹೇಗೆ ಸೇರಿಹೋಗಿದೆ ಎಂದರೆ ಅದರ ಆರಂಭ, ಅಂತ್ಯ ಯಾರಿಗೂ ತಿಳಿಯದು. ವಿವಿಧ ಸಾಮಾಜಿಕ–ಧಾರ್ಮಿಕ, ಸಾಮಾಜಿಕ–ಆರ್ಥಿಕ ಮತ್ತು ಸಾಮಾಜಿಕ–ರಾಜಕೀಯ ಅಧಿಕಾರವು ಮಹಿಳೆಯ ಬದುಕಿನ ಮೇಲೆ ಹುಟ್ಟಿನಿಂದಲೇ ತೀವ್ರ ಪ್ರಭಾವ ಬೀರಿದೆ. ಬೇರೂರಿರುವ ಇಂಥ ವ್ಯವಸ್ಥೆಯನ್ನು ಹೋಗಲಾಡಿಸಲು ಸತತ ಪರಿಶ್ರಮ ಅಗತ್ಯ. ಅದೂ ಹಲವು ವರ್ಷಗಳ ಪರಿಶ್ರಮ ಬೇಕು.

ಅಂಥ ಹೋರಾಟದಿಂದ ಮೂಡಿಬರುವ ಆತ್ಮವಿಶ್ವಾಸ ಹಾಗೂ ನಡೆವಳಿಕೆಯು ಮಹಿಳೆ . ಮತ್ತು ಅವರ ಪುತ್ರಿಯರಿಗಷ್ಟೇ ಲಾಭ ಉಂಟುಮಾಡುವುದಿಲ್ಲ. ವಿಶಾಲವಾದ ಮಾನವೀಯತೆಗೇ ಅದು ಕೊಡುಗೆಯಾಗಲಿದೆ.

ಶಾಂತಿಮಂತ್ರ

ಒಳ್ಳೆಯ ಜೀವನದ ಆಸೆ ಆಕಾಂಕ್ಷೆಗಾಗಿನ ಶಾಂತಿ ಒತ್ತಾಯದ ಪ್ರದರ್ಶನದಲ್ಲಿ ಮಹಿಳೆಗೆ ಮಾತ್ರ ಸ್ಥಾನ ಎಂಬುದನ್ನು ಯಾವ ಸ್ತ್ರೀ–ಪುರುಷರೂ ಒಪ್ಪಿಕೊಳ್ಳುವುದಿಲ್ಲ. ಮಾನವನ ಭವಿಷ್ಯಕ್ಕಾಗಿ, ತಮ್ಮ ಮಕ್ಕಳಿಗೆ ಶಾಂತಿ ಮತ್ತು ಭದ್ರತೆಯ ಅವಕಾಶ ಕಲ್ಪಿಸಲು ಮಹಿಳೆಯರು ಅಂಥ ಮಾನವೀಯ ಚಳವಳಿಗಳಲ್ಲಿ ಪಾಲ್ಗೊಂಡಿದ್ದಾರೆ. ಆದುದರಿಂದಲೇ ವಿಶ್ವದಾದ್ಯಂತ ಮಹಿಳಾ ಆಂದೋಲನಗಳಲ್ಲಿ ಶಾಂತಿ ಮಂತ್ರವು ಪ್ರಮುಖವೆಂದೆನಿಸಿಕೊಂಡಿದೆ.

ಯಾವುದೇ ವಿಷಯದ ಬಗೆಗೆ ನಡೆಸುವ ಹೋರಾಟದಲ್ಲಿ ಪುರುಷರ ಜತೆ ಧ್ವನಿಗೂಡಿಸಲು ಮಹಿಳೆಯರಿಗೆ ಅವಕಾಶ ನೀಡಲಾಗುವುದೋ ಇಲ್ಲವೊ ಹೇಳಲಾಗದು. ಆದರೆ ತಮ್ಮ ಕುಟುಂಬ, ಸಮಾಜ ಹಾಗೂ ಇಡೀ ಮಾನವನಿಗಾಗಿ ಶಾಂತಿ ಮತ್ತು ಭದ್ರತೆ ಬೇಕೆಂದು ಮಹಿಳೆಯರು ಧ್ವನಿ ಎರಿಸಿದರೆ ಎಲ್ಲ ಸ್ತ್ರೀ–ಪುರುಷರು, ರಾಜಕಾರಣಿಗಳು ಅದಕ್ಕೆ ಬೆಂಬಲದ ಧ್ವನಿ ನೀಡುವುದು ಖಂಡಿತ. ○

ಏಕೆ ಈ ಅಲಕ್ಷ್ಯ?

'ಸಾರ್ಕ್' ಹೆಣ್ಣು ಮಗು ವರ್ಷದಲ್ಲಿ ಇದೀಗ ಹೆಣ್ಣು ಮಗು ಬಗೆಗೆ ಅರಿವು ಉಂಟು ಮಾಡಲು ಯತ್ನಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಈಗ ತಾನೆ ಹೊರ ಬಂದಿರುವ ಅಧಿಕೃತ ದಾಖಲೆಯೊಂದು ನೀಡಿರುವ ಅಂಕಿ ಅಂಶಗಳು ಗಾಬರಿ ಉಂಟು ಮಾಡುತ್ತವೆ.

ಭಾರತದಲ್ಲಿ ಪ್ರತಿ ವರ್ಷ 1.20 ಕೋಟಿಗೂ ಹೆಚ್ಚು ಹೆಣ್ಣು ಮಕ್ಕಳ ಜನನವಾಗುತ್ತದೆ.

ಅವರಲ್ಲಿ ಕಾಲು ಭಾಗದಷ್ಟು ಮಂದಿ ತಮ್ಮ 15ನೇ ಹುಟ್ಟು ಹಬ್ಬಕ್ಕಿಂತ ಹೆಚ್ಚು ದಿನ ಬದುಕುವುದಿಲ್ಲ. ಹೆಣ್ಣು ಮಕ್ಕಳು ಅಲ್ಪಾಯುಸ್ಸು 'ಪಡೆದುಕೊಂಡು' ಬಂದವರೆಂದು ಹೇಳುವವರೂ ಇದ್ದಾರೆ. ಆದರೆ ಈ ಅಗಾಧ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳ ಸಾವಿಗೆ ಅವರ ಬಗ್ಗೆ ಇರುವ ಪಕ್ಷಪಾತ ಧೋರಣೆಯೇ ಕಾರಣ ಎನ್ನುತ್ತದೆ ಈ ದಾಖಲೆ.

ಸಾವಿನ ಮೇಲೆ ಪ್ರಾದೇಶಿಕತೆ, ಧರ್ಮ, ಮತ್ತು ಜಾತಿ ಕೂಡ ತಮ್ಮದೇ ಆದ ರೀತಿಯಲ್ಲಿ ಪ್ರಭಾವ ಬೀರುತ್ತವೆ.

ಮಹಿಳೆಯ ಸ್ಥಾನ ಮಾನ ಹಾಗೂ ಹೆಣ್ಣು ಮಕ್ಕಳ ಸಾವು ಪರಸ್ಪರ ನೇರ ಅನುಪಾತದಲ್ಲಿವೆ. ಆವಳ ಸ್ಥಾನ ಮಾನ ಕೆಳಗಿಳಿದಷ್ಟು ಹೆಣ್ಣು ಮಕ್ಕಳ ಸಾವಿನ ಸಂಖ್ಯೆ ಏರು ಮುಖವಾಗ ತೊಡಗುತ್ತದೆ.

ಭಾರತದ 80 ಕೋಟಿ ಜನ ಸಂಖ್ಯೆಯಲ್ಲಿ ಸುಮಾರು ಕಾಲು ಭಾಗದಷ್ಟು ಮಂದಿ 19 ವರ್ಷದವರೆಗಿನ ವಯಸ್ಸಿನ ಹೆಣ್ಣು ಮಕ್ಕಳಾಗಿಧ್ದಾರೆ. ಸಾಮಾನ್ಯವಾಗಿ ಹುಡುಗರಿಗಿಂತ/ಹುಡುಗಿಯರು ಹೆಚ್ಚು ಶಕ್ತಿ ಶಾಲಿ (ದೈಹಿಕವಾಗಿ) ಗಳು. ಆದರೂ ಪ್ರತಿ ವರ್ಷ ಮೂರು ಲಕ್ಷ ಹೆಣ್ಣು ಮಕ್ಕಳು ಸಾವಿಗೀಡಾಗುತ್ತಾರೆ.

ಪ್ರಮಾಣ

ಈ ದಾಖಲೆಯಲ್ಲಿ ನಮೂದಿಸಿರುವ ಮತ್ತೊಂದು ಗಾಬರಿಯ ಅಂಶವೆಂದರೆ ಸ್ತ್ರಿ-ಪುರುಷರ ಸಂಖ್ಯೆಯಲ್ಲಿನ ಪ್ರಮಾಣ ಈ 20ನೇ ಶತಮಾನದಲ್ಲಿ ಪ್ರತಿ ದಶಕ ದಲ್ಲಿಯೂ ಈ ಪ್ರಮಾಣ ಕುಗ್ಗುತ್ತದೆ.

1901ರಲ್ಲಿ ಪ್ರತಿ ಸಾವಿರ ಪುರುಷರಿಗೆ 972 ಮಹಿಳೆ ಯರಿದ್ದರು. 1981ರಲ್ಲಿ ಅದು 933ಕ್ಕೆ ಇಳಿಯಿತು. ಬಹಳಷ್ಟು ರಾಷ್ಟ್ರಗಳಲ್ಲಿ ಸ್ತ್ರೀ-ಪುರುಷರ ಸಂಖ್ಯೆ ಏಕ ಮುಖನಾಗಿ ಏರಿಕೆ ಸೂಚಿಸಿದೆ. ಕೇರಳದಲ್ಲಿ ಮಾತ್ರ 1000 ಪುರುಷರಿಗೆ 1032 ಮಹಿಳೆಯರಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶ, ಒರಿಸ್ಸ. ತಮಿಳುನಾಡು ಮತ್ತು ಹಿಮಾಚಲ ಪ್ರದೇಶಗಳಲ್ಲಿ ಅದು 1000ಕ್ಕೆ 950 ಕ್ಕಿಂತ ಹೆಚ್ಚು.

ಸಾವಿನ ಹೋಲಿಕೆಯನ್ನು ಗಮನಿಸೋಣ. 35 ವರ್ಷ ವಯಸ್ಸಿನವರೆಗೆ ಸಾಯುವವರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚು.

24 ವರ್ಷದೊಳಗೆ ಸಾಯುವ ಮಹಿಳೆಯರಲ್ಲಿ ಶೇಕಡ 13 ಮಂದಿ ಗರ್ಭಿಣಿಯರಾಗಿದ್ದಾಗ ಮತ್ತು ಹೆರಿಗೆ ಸಮಯದಲ್ಲಿನ ತೊಂದರೆಗಳಿಗೆ ಬಲಿಯಾಗಿರೋದು ಕಂಡು ಬಂದಿವೆ ಎಂದು ದಾಖಲೆ ಹೇಳಿದೆ.

ಸಕಾಲದಲ್ಲಿ ಹೆಣ್ಣು ಮಗು ಸಾವನ್ನು ತಡೆಗಟ್ಟದಿದ್ದರೆ ಅದರಿಂದ ದೇಶವು ತೀವ್ರ ಪರಿಣಾಮ ಎದುರಿಸಬೇಕಾ ದೀತು ಎಂದು ಸಾರ್ಕ್ ದಾಖಲೆ ಎಚ್ಚರಿಸಿದೆ. ○

ಹೊಸಗದಿರಿ ನನ್ನ...!

ಅಪ್ಪ ಅವ್ವರ ಒಳವಿನಾಟದ ಬೀಜ ನಾನು
ಬಿತ್ತದ್ದು ಪೈರಾಗಿ ಚಿಸಿಲೊಡೆದು ಬಂದಿಲ್ಲ
ನೆಲಮುಗಿಲು ಒಂದಾಗಿ ಫಲವಾದ
ಹಸಿರುತೆನೆ ಮೂಡಲು ಇನ್ನೂ ಕಾಲ ಬಂದಿಲ್ಲ
ಗಟ್ಟಿಕಾಳಾಗಿ ತೂರಿ ಬರಲು ಕಣಸಿದ್ಧವಾಗಿಲ್ಲ
ನಾನಿನ್ನೂ ತಾಯಬಸಿರ ಬಿಟ್ಟಿಲ್ಲ
ಕತ್ತರಿಸಿಲ್ಲ ಕರುಳಬಳ್ಳಿ
ಬೆಚ್ಚಗೊಳಗಿರುವ ಭವಿಷ್ಯ ನಾನು
ಪಂಚೇಂದ್ರಿಯಗಳ ತಾಪ ಕಾಡದ ಹಕ್ಕಿ ನಾನು
ರೆಕ್ಕೆಪುಕ್ಕವಂತೂ ಬಲಿತಿಲ್ಲ ಇನ್ನೂ
ಅನಾದಿಕಾಲದಿಂದಲೂ ಹತ್ತಿಕ್ಕಿಸಿ ಕೊಳ್ಳುತ್ತಲೇ ಬಂದಿರುವ ಜೀವ ನಾನು
ನಿಟ್ಟುಸಿರು ನೋವುಗಳ ಸರಮಾಲೆ ನಾನು
ಯಾರೂ ಕೇಳಲಾಗದ ಮೂಕ ಹಕ್ಕಿಯ ಮೌನಗಾನವೇ ನಾನು
ಇರುಳ ಹಕ್ಕಿಯ ಆರ್ತನಾದ ತಲುಪಲಾಗದ ಕಾಡು
ಇನ್ನಾದರೂ ಭ್ರೂಣದಲ್ಲೇ ತಾಯಬಸಿರಿಂದ ಸರಿಸದಿರಿ ನನ್ನ
ಹೊಸಗದಿರಿ ನನ್ನ....! ಹೊಸಗದಿರಿ ನನ್ನ........!

—ದುರ್ಗಾಸುತೆ

ರಾಷ್ಟ್ರೀಯ ಮಹಿಳಾ ಆಯೋಗ—1990

○ ಎಸ್. ಕೆ. ಪೂರ್ಣಿಮಾದೇವಿ

ಭಾರತ ಗಣರಾಜ್ಯವು ತನ್ನ ನಲವತ್ತೊಂದನೆಯ ವಸಂತಕ್ಕೆ ಕಾಲಿಟ್ಟ ವರ್ಷ ಇದು. ಈ ಸಾಲಿನಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವೊಂದನ್ನು ರಚಿಸುವ ಸರ್ಕಾರದ ಸನ್ನಾಹ ರಾಷ್ಟ್ರಾದ್ಯಂತ ಚರ್ಚೆ, ವಿಚಾರ ಸಂಕಿರಣ, ಕಾರ್ಯಾಗಾರ, ಸಮ್ಮೇಳನಗಳಿಗೆ ವಿಷಯ ವಾಗಿದ್ದು, ಅನೇಕ ಸಲಹೆ, ಸೂಚನೆಗಳು ಒಡಮೂಡಿ ಬಂದಿವೆ. ರಾಷ್ಟ್ರೀಯ ಮಹಿಳಾ ಆಯೋಗದ ಕರಡು ಮಸೂದೆಯನ್ನು ಯಥಾವತ್ತಾಗಿ ಒಪ್ಪದೆ ಕಾನೂನು ತಜ್ಞರು, ಶಿಕ್ಷಣವೇತ್ತರು, ರಾಜಕೀಯ ಗಣ್ಯರು, ಅಧಿಕಾರಿಗಳು, ಮಹಿಳಾ ಸಂಘ ಸಂಸ್ಥೆಗಳ ಕಾರ್ಯ ಕರ್ತರೇ ಮುಂತಾದವರು ಕೂಡಿ ಸೂಚಿಸಿದ ಬದಲಾವಣೆ ಗಳನ್ನು ವರದಿಯ ರೂಪದಲ್ಲಿ ಕೇಂದ್ರಕ್ಕೆ ಸಲ್ಲಿಸಲಾಗಿದೆ.

ರಾಷ್ಟ್ರದ ಪ್ರಧಾನ ಮಂತ್ರಿ ಶ್ರೀ ವಿ. ಪಿ. ಸಿಂಗ್‌ರು 'ಮಹಿಳೆಯರ ಪಾಲಿಗೆ 'ಸಮಾನತೆಯ ಹಕ್ಕು' ನಿಜವಾದ ಅರ್ಥದಲ್ಲಿ ಸಿಗುವಂತೆ ಸಂವಿಧಾನಾತ್ಮಕವಾಗಿ ಭರವಸೆ ನೀಡುವುದಕ್ಕೆ ಸರ್ಕಾರ ಬದ್ಧವಾಗಿದ್ದು, ದಿಸೆಯಲ್ಲಿನ ಮೊದಲ ಪ್ರಯತ್ನ ಇದು. ಮಹಿಳೆಯಲ್ಲಿ ಆತ್ಮವಿಶ್ವಾಸ ಮೂಡಿಸಿ, ತಮ್ಮ ಹಕ್ಕುಬಾಧ್ಯತೆಗಳನ್ನು ಜಾರಿಗೊಳಿಸಲು ನೆರವಾಗುವ ಸಲುವಾಗಿ ಈ ರಾಷ್ಟ್ರೀಯ ಮಹಿಳಾ ಆಯೋಗವನ್ನು ರಚಿಸಲಾಗುವುದಲ್ಲದೆ, ಇದಕ್ಕೆ ಶಾಸನ ಬದ್ಧ ಅಧಿಕಾರ ನೀಡಲಾಗುವುದು "ಎಂದು ಇದೇ ಆಗಸ್ಟ್ 8ರ ತಮ್ಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, "ಹಣವನ್ನು ಒದಗಿಸುವುದರಿಂದ ಮಾತ್ರವೇ ಮಹಿಳೆಯರ ಉದ್ಧಾರ ಸಾಧ್ಯವಿಲ್ಲ. ಅವರ ಸಮಸ್ಯೆಗಳ ನಿವಾರಣೆಗೆ ಆಯೋಗದಂತಹ ವ್ಯಾಪಕ ಸಂಸ್ಥೆಯೊಂದು ಅತ್ಯಗತ್ಯ" ಎಂದು ತಿಳಿಸಿರುವ ಪ್ರಧಾನಮಂತ್ರಿಯವರು "ಡಾ॥ ಫೂಲರೇಣು ಗುಹಾ ಅವರ ನೇತೃತ್ವದಲ್ಲಿ 1971 ರಲ್ಲಿ ಭಾರತದಲ್ಲಿ ಮಹಿಳೆಯ ಸ್ಥಾನ ಮಾನ ಕುರಿತ ಸಮಿತಿಯ ವರದಿ ಈ ತನಕ ಕಾರ್ಯಗತಗೊಂಡಿಲ್ಲವಾದ್ದ ರಿಂದ ಸದರಿ ಆಯೋಗವು ಪ್ರತ್ಯೇಕ ಮಹಿಳಾಪರ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಮಾಡಲು ಅವಕಾಶ ಕಲ್ಪಿಸಲಾಗುತ್ತದೆ" ಎಂದಿದ್ದಾರೆ.

ಈ ಆಯೋಗದ ರಚನೆಗೆ ರಾಷ್ಟ್ರಾದ್ಯಂತ ಉತ್ಸಾಹದ ಸ್ವಾಗತವಿದ್ದು ಇದೊಂದು ಚಾರಿತ್ರಿಕ ನಿರ್ಧಾರ ಎನ್ನ ಲಾಗಿದೆ. 1990ರ ಏಪ್ರಿಲ್ ತಿಂಗಳ ಬಜೆಟ್ ಅಧಿವೇಶನ ದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಕರಡು ಮಸೂದೆಯನ್ನು ಮಂಡಿಸಲಾಯಿತು. The National Commission for women-1990, Bill No. 94, 1990) ಅಲ್ಲಿಂದೀಚೆಗೆ, ಆಗಸ್ಟ್ 9 ರಂದು ಲೋಕ ಸಭೆಯಲ್ಲಿ ಈ ಕರಡು ಮಸೂದೆಯು ಕೆಲವು ಸೂಚಿತ ತಿದ್ದುಪಡಿಗಳೊಂದಿಗೆ ಸರ್ವಾನುಮತದಿಂದ ಅಂಗೀಕಾರ ಪಡೆಯಿತು. ಈ ಆಯೋಗಕ್ಕೆ ಹೆಚ್ಚಿನ ಅಧಿಕಾರವಿರ ಬೇಕೆಂದೂ, ಪರಿಶಿಷ್ಟ ಜಾತಿ / ಬುಡಕಟ್ಟಿನ ಆಯೋಗಕ್ಕೆ ಇರುವಂತಹ ಪರಿಣಾಮಕಾರಿ ಅಧಿಕಾರವಿರಬೇಕೆಂದೂ, ಇದು ಮಹಿಳಾ ಹಕ್ಕುಗಳಿಗೆ ಖಾಯಂ ಕಾವಲು ಸಂಸ್ಥೆ ಯಾಗಬೇಕೆಂದೂ ಹಲವರು ಸೂಚಿಸಿದರೆ. ಮತ್ತೆ ಕೆಲವರು ಈ ಶಾಸನವು ರಾಜಕೀಯ ಉದ್ದೇಶಗಳಿಂದ ಕೂಡಿದೆ ಯಷ್ಟೇ ಅಲ್ಲದೆ, ಇದರಲ್ಲಿ ಹೊಸತೇನಿಲ್ಲವೆಂದು ವಾದಿಸಿದ್ದಾರೆ.

ರಾಷ್ಟ್ರಮಟ್ಟದಲ್ಲಿ ಸ್ಥಾಪಿತವಾಗಲಿರುವ ಈ ಆಯೋಗದ ನಿಟ್ಟಿನಲ್ಲಿಯೇ ರಾಜ್ಯಮಟ್ಟದ ಆಯೋಗಗಳು ರಚಿತವಾಗುವ ನಿರೀಕ್ಷೆಯಿದ್ದು, ಈ ಬಗ್ಗೆ ಕೇಂದ್ರದ ಕ್ಷೇಮಾಭಿವೃದ್ಧಿ ಸಚಿವರಾದ ಶ್ರೀ ರಾಮ್ ವಿಲಾಸ್ ಪಾಸ್ವಾನರವರು ರಾಜ್ಯಗಳ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ತಿದ್ದುಪಡಿಗೊಂಡ ಮಸೂದೆಯು ಆಯೋಗಕ್ಕೆ ವ್ಯಾಪಕವಾದ ಶಾಸನಬದ್ಧ ಅಧಿಕಾರ ಪಡೆದಿರುವುದಲ್ಲದೆ, ಪರಿಶಿಷ್ಟ ಜಾತಿ/ಬುಡಕಟ್ಟಿನ ಆಯೋಗಕ್ಕೆ ತತ್ಸಮಾನ ಮಾನವಾದ ಅಧಿಕಾರ ಪಡೆದಿರುವುದು ಮಹಿಳೆಯರ ಬಗ್ಗೆ

ಕಳಕಳಿ ಇರುವ ಎಲ್ಲರಿಗೂ ಸಮಾಧಾನ ತರುವ ಅಂಶ. ಈ ಕ್ರಮದಿಂದ ಮಹಿಳೆಯ ಸ್ಥಾನಮಾನಗಳು ಇಂದಿನ ಸಾಮಾಜಿಕ; ರಾಜಕೀಯ, ಆರ್ಥಿಕ ವ್ಯವಸ್ಥೆಯಲ್ಲಿ ಉತ್ತಮಗೊಳ್ಳುವ ಭರವಸೆಯಿದೆ.

ಇತ್ತೀಚೆಗೆ ವರದಿಯಾದಂತೆ ಜಿಲ್ಲಾ ಪರಿಷತ್ತುಗಳ ಸ್ಥಾನಕ್ಕೆ ಶೇಕಡ 30ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸುವ ಬಗ್ಗೆ ಸರ್ಕಾರವು ಶಾಸನವೊಂದನ್ನು ಜಾರಿಗೆ ತರಲಿದೆ. ಅಲ್ಲದೆ ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳ ಇತ್ಯರ್ಥಕ್ಕೆ "ವಿಶೇಷ ನ್ಯಾಯಾಲಯ"ವನ್ನು (ಕುಟುಂಬ ನ್ಯಾಯಾಲಯಗಳಲ್ಲದೆ) ಸ್ಥಾಪಿಸಲು ಕರ್ನಾಟಕ ಸರ್ಕಾರ ಆಜ್ಞೆ ಹೊರಡಿಸಿದೆ. ಇಷ್ಟೆಲ್ಲ ಇದ್ದೂ, ನಿರೀಕ್ಷಿಸಿದ ಬದಲಾವಣೆ ಆಗಿದೆಯೇ ಎಂದು ಕೇಳಿಕೊಳ್ಳಬೇಕಿದೆ. ನಿಜ, ಕಳೆದ ಶತಮಾನದ ಮಹಿಳೆಗೂ ಇಂದಿನ ಮಹಿಳೆಗೂ ವ್ಯತ್ಯಾಸ ಇದೆ. ಆದರೆ 400 ಮಿಲಿಯನ್‌ಗೂ ಮೀರಿದ ಮಹಿಳೆಯರಲ್ಲಿ ಮುಕ್ಕಾಲು ಪಾಲು ಅನಕ್ಷರಸ್ಥರಾಗಿದ್ದು, ಅಂಕಿ–ಅಂಶಗಳ ಆಕರ್ಷಕ ವರದಿ ಹೇಗೆ ಇದ್ದರೂ, ಇವರಿಗೆ ನ್ಯಾಯಕ್ಕಾಗಿ ಕಾನೂನು-ಕೋರ್ಟು ಚಾಲು ಮಾಡಬಲ್ಲ ಛಾತಿ ಕಡಿಮೆ. ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ಇರುವ ಇಂದಿನ ಪರಿಸ್ಥಿಯಲ್ಲೂ, ಗ್ರಾಮೀಣ ಮಹಿಳೆಯರ ದುಸ್ಥಿತಿ ಸುಧಾರಿಸಿಲ್ಲ ಎಂಬ ಸತ್ಯ ಸಂಗತಿ ವಿಷಾದನೀಯ.

ಫಿಲಿಪೈನ್ಸ್‌ನ ಮನಿಲಾದ ಜನಸಂಖ್ಯಾ ಸಂಸ್ಥೆಯ ಪ್ರಾಧ್ಯಾಪಕಿ ಡಾ॥ ಮರ್ಸಿಡೆಸ್ ಬಿ ಕಾನ್‌ಸೆಪ್ಶಿಯನ್ ಯವರ ಮಾತನ್ನಿಲ್ಲಿ ಗಮನಿಸೋಣ. "ಮಹಿಳೆಯರು ಸಾಮಾನ್ಯವಾಗಿ ತಮಗಾಗಿ ಇರುವ ಅಭಿವೃದ್ಧಿ ಯೋಜನೆಗಳ ಪ್ರಯೋಜನ ಪಡೆಯುವಲ್ಲಿ ವಿಫಲರಾಗುತ್ತಾರೆ. ಕಾರಣ, ಈ ಯೋಜನೆಗಳಿಗೂ ಮಹಿಳೆಯರ ನಿಜ ಜೀವನದ ಅಗತ್ಯಗಳಿಗೂ ಸಾಮರಸ್ಯವೇ ಇಲ್ಲದಿರುವುದು ಅಲ್ಲದೆ, ಸಾಕಷ್ಟು ಸುಸ್ಥಿಯಲ್ಲಿರುವ ಮಹಿಳೆಯರನ್ನು ದೃಷ್ಟಿಯಲ್ಲಿರಿಸಿಕೊಂಡೇ ಯೋಜನೆ ಹಾಕಿದರೆ, ದುರ್ಬಲ ಮಹಿಳೆಯರಿಗೆ ಆಗುವ ಪ್ರಯೋಜನವೇನು ? ಸೌಲಭ್ಯವನ್ನು ಕಂತುಕಂತಾಗಿ ಚೂರುಪಾರಿನಂತೆ ನೀಡದೆ ಒಟ್ಟಾರೆ ನೀಡಿದರೆ ಒಳಿತು. ವಿರೋದಾಭಾಸಕ್ಕೆಡೆ ಮಾಡಿಕೊಡುವ ಪ್ರಸಕ್ತ ವ್ಯವಸ್ಥೆ ಬದಲಾಗಬೇಕು."

ರಾಷ್ಟ್ರೀಯ ಮಹಿಳಾ ಆಯೋಗದ ಮಸೂದೆಯ ಸೆಕ್ಷನ್ 10ರಲ್ಲಿ ಆಯೋಗದ ಮುಖ್ಯ ಕಾರ್ಯಗಳನ್ನು ವಿವರಿಸಲಾಗಿದೆ. ಈಗಿನ ಸಲಹೆ ನೀಡುವ ಕಾರ್ಯಕ್ಕೆ ಆಯೋಗವನ್ನು ಸೀಮಿತಿಗೊಳಿಸದೆ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖಾ ಅಧಿಕಾರವನ್ನು ಜಾರಿಗೆ ತರುವ ಅಧಿಕಾರವನ್ನು ನೀಡುವುದರ ಅಗತ್ಯಕ್ಕೆ ಹೆಚ್ಚು ಒತ್ತು ಕೊಡುವುದು ಅನಿವಾರ್ಯ. ಆಯೋಗದ ಸದ್ಯದ ಕಾರ್ಯವ್ಯಾಪ್ತಿಯೆಂದರೆ,

1) ಕಾನೂನು ಹಾಗೂ ಸಂವಿಧಾನಾತ್ಮಕ ಮಹಿಳಾ ಹಕ್ಕುಗಳ ಪುನರ್ ಪರಿಶೀಲನೆ ನಡೆಸುವುದು ಹಾಗೂ ಶಾಸನಗಳಿಗೆ ತಿದ್ದುಪಡಿ ತರುವುದೂ ಸೇರಿದಂತೆ ಸರ್ಕಾರಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಶಿಫಾರಸು ಮಾಡುವುದು.

2) ಮಹಿಳೆಯರಿಗೆ ಸಂಬಂಧಿಸಿದಂತಹ ಕಾನೂನು ಮತ್ತು ಸಂವಿಧಾನಾತ್ಮಕ ಸೌಲಭ್ಯಗಳನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಪರಿಹಾರಕ್ರಮಕ್ಕಾಗಿ ವ್ಯವಹರಿಸುವುದು.

3) ಹಕ್ಕುಗಳಿಂದ ವಂಚಿತರಾದ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ಕಾನೂನು, ನೀತಿ ನಿಯಮಾವಳಿಗಳನ್ನು ಪಾಲಿಸದ ಪ್ರಕರಣಗಳನ್ನು ಪರಿಶೀಲಿಸಿ, ಸಂಬಂಧಿಸಿದ ಅಧಿಕಾರಿಗಳಲ್ಲಿ ಈ ಬಗ್ಗೆ ಪರಿಶೀಲನೆಗೆ ಕ್ರಮ ಕೈಗೊಳ್ಳುವುದು.

4) ವಿಶೇಷ ಸಮಸ್ಯೆಗಳಾದ ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಪರಿಹಾರ ಕ್ರಮಗಳನ್ನು ಶಿಫಾರಸು ಮಾಡುವ ಸಲುವಾಗಿ ಅಧ್ಯಯನ ಮಾಡುವುದು.

5) ಮಹಿಳೆಯರ ಅಭಿವೃದ್ಧಿಗಾಗಿ ಸಂಶೋಧನೆಗಳನ್ನು ಕೈಗೊಳ್ಳುವುದು.

6) ಮಹಿಳೆಯರನ್ನು ಇರಿಸಿರುವ ರಕ್ಷಣಾ ಸಂಸ್ಥೆಗಳನ್ನು ಪರೀಕ್ಷಿಸಿ ಸಂಬಂಧಿಸಿದ ಅಧಿಕಾರಿಗಳೊಡನೆ ಪರಿಹಾರಕ್ರಮ ಅಗತ್ಯವಿದ್ದಲ್ಲಿ ಕೈಗೊಳ್ಳಲು ಸೂಚಿಸುವುದು.

7) ಸರ್ಕಾರಕ್ಕೆ ಕಾಲಕಾಲಕ್ಕೆ ವರದಿಗಳನ್ನು ಸಲ್ಲಿಸುವುದು ಮತ್ತು

8) ಹೆಚ್ಚಿನ ಸಂಖ್ಯೆಯ ಮಹಿಳೆಯರಿಗೆ ಅನ್ಯಾಯವಾಗುವಂತಹ ವಿಷಯಗಳಲ್ಲಿ ಕಾನೂನು ಕ್ರಮಗಳಿಗಾಗಿ ಧನಸಹಾಯ ಮಾಡುವುದು.

ಈ ಕಾರ್ಯವ್ಯಾಪ್ತಿಯ ಸಂಕುಚಿತತೆಯ ಬಗ್ಗೆ, ಇತಿ–ಮಿತಿಗಳನ್ನು ಕುರಿತು ಸುದೀರ್ಘ ಚರ್ಚೆ ನಡೆಸಲಾಗಿದೆ.

ರಾಷ್ಟ್ರೀಯ ಮಹಿಳಾ ಆಯೋಗದ (1900) ಕರಡು ಮಸೂದೆಯು ಐದು ಅಧ್ಯಾಯಗಳನ್ನೂ, 17 ಸೆಕ್ಷನ್‌ಗಳನ್ನೂ ಹೊಂದಿದ್ದು, ಮೊದಲ ಅಧ್ಯಾಯದಲ್ಲಿ ಆಯೋಗದ ಪರಿಚಯವನ್ನು ನೀಡಿ, ಸೆಕ್ಷನ್ 1 ರಲ್ಲಿ ಆಯೋಗದ ಶೀರ್ಷಿಕೆ, ವ್ಯಾಪ್ತಿ ಮತ್ತು ಪ್ರಾರಂಭವನ್ನು ವಿವರಿಸಿ: ಸೆಕ್ಷನ್ 2 ರಲ್ಲಿ ಆಯೋಗದ ಅರ್ಥ ವ್ಯಾಪ್ತಿಯನ್ನು ತಿಳಿಸಲಾಗಿದೆ. ಎರಡನೆಯ ಅಧ್ಯಾಯವು 7 ಸೆಕ್ಷನ್‌ಗಳನ್ನು ಹೊಂದಿದ್ದು, ಸೆಕ್ಷನ್ 3ರ ಲ್ಲಿ ಆಯೋಗದ ರಚನೆ, S–4 ರಲ್ಲಿ ಆಯೋಗದ ಕಾರ್ಯಾವಧಿ, ಅಧ್ಯಕ್ಷರು ಮತ್ತು ಸದಸ್ಯರ ಸೇವಾ ನಿಯಮಗಳನ್ನು ನೀಡಲಾಗಿದೆ. S–5 ರಲ್ಲಿ ಆಯೋಗದ ಅಧಿಕಾರಿಗಳು, ಮತ್ತಿತರ ಉದ್ಯೋಗಿಗಳು ; S–6 ರಲ್ಲಿ ಕ್ರೋಢೀಕೃತ ಕೇಂದ್ರದ ನಿಧಿಯಿಂದ ವೇತನ ನೀಡಿಕೆ, S–7 ರಲ್ಲಿ ಯಾವುದೇ ಹುದ್ದೆ ಖಾಲಿಯಿದ್ದ ಮಾತ್ರಕ್ಕೆ ಆಯೋಗದ ನಡಾವಳಿಯನ್ನು ಪ್ರಶ್ನಿಸುವ ಅಥವಾ ತಳ್ಳಿಹಾಕುವ ಸಾಧ್ಯತೆ ಇಲ್ಲದಿರುವುದು, S–8 ರಲ್ಲಿ ಕಾಲಕಾಲಕ್ಕೆ ಆಯೋಗವು ಸಮಿತಿಗಳು ಮತ್ತು S–9 ರಲ್ಲಿ ಆಯೋಗವು ಅನುಸರಿಸುವ ಕಾರ್ಯವಿಧಾನದ ವಿವರಗಳಿವೆ. ಅಧ್ಯಾಯ ಮೂರರಲ್ಲಿ ಆಯೋಗದ ಕಾರ್ಯ ವ್ಯಾಪ್ತಿಯನ್ನು S–10ರ (a ಯಿಂದ j ವರೆಗೆ) ಸವಿವರವಾಗಿ ಈ ಹಿಂದೆ ತಿಳಿಸಿರುವಂತೆ ವಿವರಿಸಲಾಗಿದೆ. ನಾಲ್ಕನೆಯ ಅಧ್ಯಾಯವು ಹಣಕಾಸು, ಲೆಕ್ಕಪತ್ರ ಮತ್ತು ಪರಿಶೋಧನೆಗೆ ಸಂಬಂಧಿಸಿದ್ದು S–11 ರಲ್ಲಿ ಕೇಂದ್ರ ಸರ್ಕಾರದ ಅನುದಾನ, S–12 ರಲ್ಲಿ ಲೆಕ್ಕಪತ್ರ ಮತ್ತು ಪರಿಶೊಧನೆ S–13 ರಲ್ಲಿ ವಾರ್ಷಿಕ ವರದಿ ಮತ್ತು S–14 ರಲ್ಲಿ ವಾರ್ಷಿಕ ವರದಿ ಮತ್ತು ಲೆಕ್ಕಪತ್ರ ಪರಿಶೋಧನೆಯ ವರದಿಯನ್ನು ಸಂಸತ್ತಿನಲ್ಲಿ ಮಂಡಿಸುವ ಬಗ್ಗೆ ತಿಳಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಇನ್ನಿತರ ವಿಷಯಗಳು ಎಂದಿದ್ದು, S-15 ರಲ್ಲಿ ಆಯೋಗದ 'ಅಧ್ಯಕ್ಷರು, ಸದಸ್ಯರು' ಉದ್ಯೋಗಿಗಳು ಸರ್ಕಾರಿ ಸೇವಕರೆಂದೂ S–16 ರಲ್ಲಿ ಕೇಂದ್ರ ಸರ್ಕಾರವು ನೀಡುವ ಆದೇಶಗಳ ಬಗ್ಗೆಯೂ ಮತ್ತು S–17ರಲ್ಲಿ ನಿಯಮಾವಳಿ ರಚಿಸಲು ಇರುವ ಅಧಿಕಾರವನ್ನೂ ವಿವರಿಸಲಾಗಿದೆ.

ಕರಡು ಮಸೂದೆಯ ಕಡೆಯಲ್ಲಿ ಕೇಂದ್ರ ಕ್ಷೇಮಾಭಿವೃದ್ಧಿ ಸಚಿವರಾದ ಶ್ರೀ ರಾಮ್‌ವಿಲಾಸ್ ಪಾಸ್ವಾನ್‌ರ 10-5-90ರ ಆಯೋಗದ ಉದ್ದೇಶ ಮತ್ತು ಕಾರಣಗಳ ಹೇಳಿಕೆಯ ಉಲ್ಲೇಖವಿದ್ದು, ನಂತರ ಅನುದಾನದ ವಿವರಗಳೊಂದಿಗೆ ಮಸೂದೆಯನ್ನು ಕಾರ್ಯಗತಗೊಳಿಸಲು ಬೇಕಿರುವ ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಇರುವ ಅಧಿಕಾರದ ಪ್ರಸ್ತಾಪದೊಂದಿಗೆ ಉದ್ದೇಶಿತ ರಾಷ್ಟ್ರೀಯ ಮಹಿಳಾ ಆಯೋಗದ ಕರಡು ಮಸೂದೆ ಕೊನೆಗೊಳ್ಳುತ್ತದೆ.

ರಾಷ್ಟ್ರೀಯ ಮಹಿಳಾ ಆಯೋಗ ರಚನೆಗೆ ಸಂಬಂಧಿಸಿದ ವಿಧೇಯಕದ ಬಗ್ಗೆ ಚರ್ಚೆ ವಿಮರ್ಶೆ ನಡೆಸಲು ಇತ್ತೀಚೆಗೆ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಹಾಗೂ ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ ಸಹಯೋಗದೊಡನೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಕಾರ್ಯಾಗಾರದ ಪ್ರಾಸ್ತವಿಕ ಭಾಷಣ ಮಾಡಿದ ನ್ಯಾಯಮೂರ್ತಿ ಎಸ್. ಮೋಹನ್ ರವರು ಆಯೋಗದ ಅಧ್ಯಕ್ಷ ಸ್ಥಾನಕ್ಕೆ ವೃತ್ತಿಪರ ಅನುಭವ ಉಳ್ಳಂತಹ ವ್ಯಕ್ತಿಯನ್ನೇ ನೇಮಿಸಲು ಸಲಹೆ ಮಾಡಿದರಲ್ಲದೆ, ಹಿಂದಿನ 'ಮಿತಾಕ್ಷರ'ವನ್ನೇ ಸಮಕಾಲೀನ ಸಮಸ್ಯೆಗಳಿಗೆ ಅನ್ವಯಿಸದೆ, ಸೂಕ್ತ ಮಾರ್ಪಾಡು ಆಗಬೇಕೆಂದರು. ಈಗಿರುವ ಅನೇಕ ಕಾನೂನುಗಳನ್ನು ಜಾರಿಗೆ ತರುವಂತಹ ವ್ಯವಸ್ಥೆಯ ಕೊರತೆಯಿಂದಾಗಿ ಅವು ಚಲಾವಣೆಯಲ್ಲಿಲ್ಲ. ಈ ಕಾರಣ, ಆಯೋಗದ ವ್ಯಾಪ್ತಿಯಲ್ಲಿ ಮಹಿಳೆಗೆ ಸಂಬಧಿಸಿದ ಎಲ್ಲ ವಿಷಯಗಳನ್ನು ಚರ್ಚಿಸಿ, ಪರಿಶೀಲಿಸಿ, ವರದಿ ಸಲ್ಲಿಸುವ ಕಾರ್ಯಗಳಲ್ಲದೆ ಜಾರಿಗೆ ತರುವ ಅಧಿಕಾರವೂ ಇರುವುದು ಅತ್ಯಗತ್ಯವೆಂದು ನುಡಿದ ಅವರು ಸೋದಾಹರಣಗಳ ಮೂಲಕ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ಉದಾಹರಣೆಗೆ : 1) ಸಂಜೆ ಆರುಗಂಟೆಯ ನಂತರ ಮಹಿಳೆಯರನ್ನು ಉದ್ಯೋಗದಲ್ಲಿ ತೊಡಗಿಸಬಾರದೆಂಬ

ಕಾನೂನು ಇದ್ದರೂ ಚಾಲ್ತಿಯಲ್ಲಿ ಇಲ್ಲ. ಬಡತನದ ಬವಣೆಯಿಂದಾಗಿ ಮಹಿಳೆಯರು ರಾತ್ರಿಪಾಳಿಯಲ್ಲಿ ದುಡಿಯುವುದು ಅನಿವಾರ್ಯವಾಗಿದೆ.

2) ಸಮಾನ ಕಾರ್ಯಕ್ಕೆ ಸಮಾನ ವೇತನ ಎಂಬ ಕಾನೂನು ಇದ್ದರೂ ಇದು ಜಾರಿಯಲ್ಲಿ ಇಲ್ಲದಿರುವುದು ಸರ್ವವಿದಿತ.

3) ಮಾತೃತ್ವ ಸೌಲಭ್ಯಗಳಿಗೆ ಸಂಬಂಧಿಸಿದ ಕಾನೂನು ಜಾರಿಯಲ್ಲಿ ವೈಫಲ್ಯ.

4) ವರದಕ್ಷಿಣೆಗೆ ಕಾನೂನಿಗೆ ಸಂಬಂಧಿಸಿದಂತೆ ಇಂಡಿಯನ್ ಫೀನಲ್ ಕೋಡ್‌ನಲ್ಲಿ ಎಸ್–113(ಎ) ಅನ್ನು ಸೇರಿಸಿ ಪತಿಯು ಅಪರಾಧ ಪ್ರಚೋದಕನಾಗಿದ್ದಲ್ಲಿ ಶಿಕ್ಷಾರ್ಹವೆಂದು ಮಹಿಳೆಯರ ಹಿತದೃಷ್ಟಿಯಿಂದ ಪರಿಗಣಿಸಲಾಗಿದೆ.

ಮಸೂದೆಯನ್ನು ಅಂಗೀಕರಿಸಿ, ಆಯೋಗವನ್ನು ಸ್ಥಾಪಿಸುವುದು ಮಾತ್ರವಲ್ಲದೆ, ಆಯೋಗಕ್ಕೆ ಜಾರಿಗೆ ತರುವ ಅಧಿಕಾರವನ್ನು ನೀಡಿದಲ್ಲದೆ ಪ್ರಯೋಜನವಿರದು ಎಂದು ನ್ಯಾಯಮೂರ್ತಿಗಳು ಅಭಿಪ್ರಾಯ ವ್ಯಕ್ತಪಡಿಸಿ, ಮಸೂದೆಗೆ ಸಂಬಧಿಸಿದ ಹಾಗೂ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸುವವರು ಗಮನಿಸಲೇಬೇಕಾದ ಎರಡು ಅಂಶಗಳನ್ನು ಸೂಚಿಸಿದರು.

1) ಆರ್ಥಿಕ ಸ್ವಾತಂತ್ರ್ಯವು ನಿಜವಾದ ಅರ್ಥದಲ್ಲಿ ಮಹಿಳೆಗೆ ದೊರೆಯುವಂತೆ ಮಾಡಬೇಕು. ಹಾಗೂ

2) ಭಾರತದಾದ್ಯಂತ ಮಹಿಳೆಯರಿಗೆ ಕಾನೂನು ಸಾಕ್ಷರತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

ನಾನ್ನೂರು ಮಿಲಿಯನ್‌ಗೂ ಮೀರಿದ ಸಂಖ್ಯೆಯಲ್ಲಿರುವ ಮಹಿಳೆಯರಿಗೆ ಕೇವಲ ಆರು ಮಂದಿಯ ರಾ. ಮ. ಆ. ಅದೆಷ್ಟು ಸೂಕ್ತ ? ಎಂದು ಕಳಕಳಿಯಿಂದ ಪ್ರಶ್ನಿಸಿದವರು ನಂತರ ಮಾತನಾಡಿದ ರಾಷ್ಟ್ರೀಯ ಕಾನೂನು ಶಾಲೆಯ ಪ್ರಾಚಾರ್ಯರಾದ ಡಾ. ಎನ್.ಎಸ್. ಮಾಧವ ಮೆನನ್ ರವರು. ಅವರು ಈ ದಿಕ್ಕಿನಲ್ಲಿ, ರಾಜ್ಯಮಟ್ಟದ ಆಯೋಗಗಳನ್ನಾಗಲೀ ಅಥವಾ 4 ಪ್ರಾದೇಶಿಕ ಆಯೋಗಗಳನ್ನಾಗಲೀ ರಚಿಸಬೇಕೆಂದರು.

ಅಂತೆಯೇ ಆಯೋಗದ ಸದಸ್ಯತ್ವ ಸಂಖ್ಯೆಯನ್ನು ಹೆಚ್ಚಿಸುವುದೇ ಅಲ್ಲದೆ, ಸದಸ್ಯತ್ವಕ್ಕೆ ನಾಮಕರಣ ಮಾಡುವಲ್ಲಿ ಕೆಲವು ನಿಯಮಾವಳಿಗಳನ್ನು ರೂಪಿಸಿ ಸಮರ್ಥವಾದ ಒಂದು "ಸರ್ಚ್ ಕಮಿಟಿ" ನೇಮಿಸುವುದು ಸೂಕ್ತವಾದುದೆಂದರು. ಆಯೋಗದ ಕಾರ್ಯವಿಧಾನದ ನಿಯಮಾವಳಿಗಳನ್ನು ರಚಿಸುವುದು ಸೆಕ್ಷನ್ 10ರಲ್ಲಿರುವಂತೆ, ಸ್ವಾಗತಾರ್ಹವಾಗಿದ್ದು, ಮಹಿಳೆಯರಿಗಾಗಿ ಅಭಿವೃದ್ಧಿಪರ ಕಾರ್ಯಗಳಿಗೆ ಬೇಕಿರುವ ಹಣವನ್ನು ಪಡೆಯಲು ಮಸೂದೆಯಲ್ಲಿ ಅವಕಾಶವಿರಬೇಕೆಂದರು.

ಗಣ್ಯವ್ಯಕ್ತಿಗಳ ಸಾಲಿನಲ್ಲಿ ಸೇರಿಸಬಹುದಾದ ವ್ಯಕ್ತಿಗಳನ್ನು ನಿರ್ಧರಿಸುವಲ್ಲಿ ಅವರ ಹಿನ್ನೆಲೆಯನ್ನು ಗಮನಿಸಿ ವೃತ್ತಿಪರ ದಕ್ಷತೆ ಇರುವಂತಹ ಸಮರ್ಥರನ್ನು ನೇಮಿಸಬೇಕೆಂದು ಪ್ರತಿಪಾದಿಸಿದ್ದು ಎಸ್ – 14 ರಲ್ಲಿರುವಂತೆ ವಾರ್ಷಿಕ ವರದಿಗಳನ್ನು ಸಂಸತ್ತಿನಲ್ಲಿ ಮಂಡಿಸದೆ 3 ತಿಂಗಳ ಒಳಗೆ ಮಂಡಿಸಬೇಕೆಂದರು. ಎಸ್–15ರಲ್ಲಿ ನಿರ್ದೇಶನಗಳನ್ನು ಪಾಲಿಸಿರದಿದ್ದುದ್ದಕ್ಕೆ ಸರಕಾರವು ವಿವರಣೆ ನೀಡುವಂತಿರಬೇಕು. ಎಸ್–10ರಲ್ಲಿ ಈಗಿರುವಂತೆಯೇ ಪರಿಶೀಲನೆ, ಪರಿಶೋಧನೆ, ಅಧ್ಯಯನ ಮುಂತಾದ ಕಾರ್ಯಗಳು ಹಾಗೆಯೇ ಇದ್ದು, ಜನಾಭಿಪ್ರಾಯ ಮೂಡಿಸುವಲ್ಲಿ ಹಾಗೂ ಬದಲಾಯಿಸುವಲ್ಲಿ ಸಮೂಹ ಮಾಧ್ಯಮಗಳು ಮಹತ್ವದ ಪಾತ್ರ ವಹಿಸುವ ಕಾರಣ, ಆ ಸಂಬಂಧದಲ್ಲೂ ಗಮನಹರಿಸಬೇಕೆಂದರು.

ನಂತರ ನಡೆದ ಕಮ್ಮಟದ ಉಸ್ತುವಾರಿಯನ್ನು ಯೋಜನಾ ಕಮೀಶನರ್ ಶ್ರೀ ಬಿ. ಕೆ. ಭಟ್ಟಾಚಾರ್ಯರವರು ವಹಿಸಿಕೊಂಡು ನಿರ್ದೇಶಿಸಿದರು. ಚರ್ಚೆಯಲ್ಲಿ ವಿವಿಧ ಕ್ಷೇತ್ರಗಳಿಂದ ಬಂದಿದ್ದ ಮಹಿಳೆಯರು ಭಾಗವಹಿಸಿದರು. ಶಿಕ್ಷಣ, ಕಾನೂನು, ಸಮಾಜಸೇವೆ, ಶಾಸಕಾಂಗ ಪತ್ರಿಕೋದ್ಯಮ, ನ್ಯಾಯವಾದಿಗಳೇ ಮುಂತಾದವರು ಪ್ರತಿನಿಧಿಸಿದ್ದರು.

ಈ ಕಾರ್ಯಗಾರವು ರಾಷ್ಟ್ರೀಯ ಮಹಿಳಾ ಆಯೋಗ ರಚನೆಗೆ ಹಾರ್ದಿಕ ಸ್ವಾಗತ ಬಯಸಿ, ಕರಡು ಮಸೂದೆಯ ಪುನರ್ ಪರಿಶೀಲನೆಗೊಂಡು, ಸೂಚಿತ ತಿದ್ದುಪಡಿಗಳೊಂದಿಗೆ ಸಂಸತ್ತಿನಲ್ಲಿ ಮಂಡಿತವಾಗಿ ಅಂಗೀಕೃತಗೊಳ್ಳಲಿ ಎಂಬ ಒಮ್ಮತಕ್ಕೆ ಬಂದು, ಕೆಳಕಂಡ ಸಲಹೆಗಳನ್ನು ವರದಿಯ ರೂಪದಲ್ಲಿ ಕೇಂದ್ರಕ್ಕೆ ಕಳುಹಿಸಲು ತೀರ್ಮಾನಿಸಿತು.

1) ಆಯೋಗದ ಶಿಫಾರಸುಗಳನ್ನು ಕಾರ್ಯಗತಗೊಳಿಸುವುದು ಸರ್ಕಾರದ ಕರ್ತವ್ಯವಾಗಲಿ.

2) ಆಯೋಗವು ಹಿಂದಿನ ಸಮಿತಿಗಳಂತೆ ಪಾಸ್ತವಾಂಶ ನೀಡುವ ಸಂಸ್ಥೆಯಾಗದೆ ವ್ಯಾಪಕ ಅಧಿಕಾರ ಹೊಂದಿರಬೇಕು. ವಿಶೇಷವಾಗಿ, ನೀತಿ–ನಿಯಮಾವಳಿ ರಚಿಸುವ ಅಧಿಕಾರ, ತನಿಖಾ ಅಧಿಕಾರ ಹಾಗೂ ಜಾರಿ ಅಧಿಕಾರವನ್ನೊಳಗೊಂಡಿರಬೇಕು. ಪರಿಶಿಷ್ಟ ಜಾತಿ/ಬುಡಕಟ್ಟಿನ ಆಯೋಗಕ್ಕೆ ತತ್ಸಮಾನ ಅಧಿಕಾರ ಇರಬೇಕು.

3) ರಾಜ್ಯವಾರು ಪ್ರಾತಿನಿಧ್ಯ, ಇಲ್ಲವೇ ಪ್ರಾದೇಶಿಕ ಆಯೋಗ ಇಲ್ಲವೇ ರಾಜ್ಯಮಟ್ಟದ ಆಯೋಗಗಳನ್ನು ರಚಿಸಿ ವಿಕೇಂದ್ರೀಕರಿಸಿದ ಅಧಿಕಾರ ನೀಡಬೇಕು.

4) ಸಮಿತಿಗಳ ವರದಿ ಸಲ್ಲಿಕೆಗೆ ಮೂರು ತಿಂಗಳ ಮಿತಿಯಿರಬೇಕು.

5) ರಾಜ್ಯ ಸಂಸ್ಥೆಗಳು, ಕೋರ್ಟ್‌ಗಳು ಮತ್ತು ಸಂವಹನ ವಿಭಾಗಗಳಲ್ಲಿ ಸಹ ಸಂಬಂಧ ಕಲ್ಪಿಸಿ, ಸಮೂಹ ಮಾಧ್ಯಮದ ಮೂಲಕ ಮಹಿಳೆಯರ ಸಮಸ್ಯೆಗಳ ಪರಿಹಾರ ಕ್ರಮಗಳನ್ನು ಪ್ರಕಟಿಸಬೇಕು.

6) ಸಮಾಜದ ಎಲ್ಲ ಕ್ಷೇತ್ರಗಳಿಗೂ ಪ್ರಾತಿನಿಧ್ಯವಿರಬೇಕು.

7) ಆಯೋಗದ ಅಧ್ಯಕ್ಷರು ರಾಜಕೀಯ ವ್ಯಕ್ತಿ ಆಗಿರದೆ, ಒಬ್ಬ ಮಹಿಳೆಯೇ ಆಗಿರಬೇಕು.

8) ಸದಸ್ಯತ್ವ ಸಂಖ್ಯೆಯು ಈಗಿನ 6 ಮಂದಿಗೆ ಬದಲಾಗಿ 12 ಮಂದಿ ಸದಸ್ಯರಾಗಬೇಕು.

9) ಸದಸ್ಯರಲ್ಲಿ ಶೇಕಡಾ 50 ರಿಂದ 70ರ ವರೆಗೆ ಮಹಿಳೆಯರೇ ಆಗಿರಬೇಕು.

10) ಸದಸ್ಯರ ಕಾರ್ಯಾವಧಿ 3 ರಿಂದ 5 ವರ್ಷಗಳಾಗಿರಬೇಕು.

11) ಪರಿಶಿಷ್ಟ ಜಾತಿ / ಬುಡಕಟ್ಟು, ಗ್ರಾಮೀಣ ಪ್ರದೇಶ, ಅಲ್ಪಸಂಖ್ಯಾತ, ದುರ್ಬಲ ಮತ್ತು ರಾಜ್ಯ ಪ್ರತಿನಿಧಿಯಾಗಿ ಈ ವರ್ಗಗಳಿಂದ ಒಬ್ಬೊಬ್ಬ ಮಹಿಳೆಗೆ ಸದಸ್ಯತ್ವವಿರಬೇಕು.

12) "ಶೋಧನಾ ಸಮಿತಿ" **Search Committee** ಮಾತ್ರವಲ್ಲದೆ, ಒಂದು "ಕಾರ್ಯಪ್ರವೃತ್ತ ಸಮಿತಿ"ಯೂ **(Action Committee)** ಇರಬೇಕು.

13) ಆಯೋಗದ ಮಸೂದೆಯಲ್ಲಿ ಸಂವಿಧಾನದ ಮಾದರಿಯಲ್ಲಿ ರಾಜ್ಯ ನಿರ್ದೇಶನ ತತ್ವಗಳನ್ನು ಅನುಸರಿಸಿ, ಮಹಿಳೆಯರಿಗೆ ಸಂಬಂಧಿಸಿದಂತೆ ನಿರ್ದೇಶನ ತತ್ವಗಳನ್ನು ಅಳವಡಿಸಬೇಕು.

14) ಕಾನೂನು ಸಾಕ್ಷರತಾ ಕ್ರಮಗಳನ್ನು ತೀವ್ರಗತಿಯಲ್ಲಿ ಕೈಗೊಳ್ಳುವಂತಾಗಬೇಕು.

15) ಗಣ್ಯವ್ಯಕ್ತಿಗಳ ಸಾಲಿನಲ್ಲಿ **(Eminent person)** ಮಾನವ ಸಂಪನ್ಮೂಲ ಇಲಾಖೆ ಸಚಿವರು, ವಿರೋಧ ಪಕ್ಷದ ನಾಯಕರು, ಒಬ್ಬ ಮಹಿಳಾ ಕುಲಪತಿ, ಒಬ್ಬ ಮಹಿಳಾ ಕಾರ್ಪೊರೇಶನ್ ಅಧ್ಯಕ್ಷರು, ಹಾಗೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ/ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಸೇರಿಸುವುದನ್ನು ಪರಿಗಣಿಸಬೇಕು.

ರಾಜ್ಯದ ಮಹಿಳಾ ಮತ್ತು ಕಲ್ಯಾಣ ಇಲಾಖೆಯು ಕರಡು ಮಸೂದೆಗೆ ತಿದ್ದುಪಡಿ ಸೂಚಿಸುವ ಶಿಫಾರಸುಗಳ ವಿವರವನ್ನು ಇದೀಗ ಪ್ರಕಟಿಸಿ, ಸಾರ್ವಜನಿಕರ ಮತ್ತು ಸಂಬಂಧಿಸಿದವರ ಗಮನಕ್ಕೆ ತಂದಿದೆ.

ಇದೇ (1990) ಆಗಸ್ಟ್‌ನ ಕಡೆಯ ವಾರದಲ್ಲಿ ತಿದ್ದುಪಡಿಗೊಂಡ ಮಸೂದೆಯು ಸಂಸತ್ತಿನಲ್ಲಿ ಮಂಡಿತಗೊಂಡು, ಸರ್ವಾನುಮತದಿಂದ ಅಂಗೀಕೃತಗೊಂಡಿರುವುದು ಸಮಾಧಾನಕರ ಸಂಗತಿಯಾಗಿದ್ದು, ಇನ್ನಾದರೂ ಮಹಿಳೆಯರ ಸ್ಥಿತಿಗತಿ ಕಿಂಚಿತ್ತಾದರೂ ಉತ್ತಮಗೊಂಡೀತೆಂಬ ಆಶ್ವಾಸನೆ ದೊರಕಿಸೀತು. ○

6ನೇ ಪುಟದಿಂದ

ಈ ಪದ್ಧತಿಯ ಉಳಿವು ಹಾಗೂ ಬೆಳವಣಿಗೆ ಕಾರಣಗಳನ್ನು ಗುರುತಿಸುವಲ್ಲಿ ಲೇಖಕರು ಸಂಪೂರ್ಣವಾಗಿ ತಪ್ಪನ್ನು ಹಿಂದೂ ಧರ್ಮದ ಮೇಲೆಯೇ ಹೊರಿಸುತ್ತಾರೆ ಮನಸ್ಮೃತಿ ಹಾಗೂ ಪುರಾಣಗಳು ಹೇಗೆ ಹೆಣ್ಣನ್ನು ಪುರುಷನ ಖಾಸಗಿ ಆಸ್ತಿಯನ್ನಾಗಿ ಮಾಡಿದೆ ಮತ್ತು ಅವಳ ಸ್ಥಾನಮಾನವನ್ನು ಕೀಳುಮಟ್ಟಕ್ಕೆ ಇಳಿಸಿದೆ, ಎಂಬುದನ್ನು ಗಟ್ಟಿಯಾಗಿ ವಿವರಿಸುತ್ತಾರೆ.

ದೇವದಾಸಿ ಪದ್ಧತಿ—ಒಂದು ಸಮಾಜ ಶಾಸ್ತ್ರೀಯ ಅಧ್ಯಯನ—ಜೋಗನ್ ಶಂಕರ್, ಆಶೀಶ್ ಪಬ್ಲಿಷಿಂಗ್ ಹೌಸ್, ಬೆಲೆ ರೂ. 150

“ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಈ ಪದ್ಧತಿ ಹೆಚ್ಚು ಬೆಂಬಲ ಪಡೆದು ಮುಂದುವರೆಯಲು ಕಾರಣವಾಯಿತು. ದೇವಾಲಯಗಳಲ್ಲಿದ್ದ ಸೂಳೆಗಾರಿಕೆ ನಗರಗಳಿಗೂ ವಿಸ್ತರಿಸಿತು. ಬ್ರಿಟಿಷ್ ಮಿಲಿಟರಿ ಸಿಬ್ಬಂದಿಗಳ ದೈಹಿಕ ಅವಶ್ಯಕತೆಗಳನ್ನು ಪೂರೈಸಲು ನೆರವಾಯಿತು. ಜೊತೆಗೆ ಬರಗಾಲದ ಪೀಡೆಯಿಂದ ಗ್ರಾಮ ಪ್ರದೇಶಗಳಲ್ಲಿ ಈ ಮಹಿಳೆಯರನ್ನು ದೇವದಾಸಿಯರಾಗಲು ಬಲಾತ್ಕರಿಸಲಾಯಿತು.

ದೇವದಾಸಿ ಪುನರ್ವಸತಿ ಯೋಜನೆಗಾಗಿ ಸರ್ಕಾರ 4 5 ಕೋಟಿ ಹಣ ವ್ಯಯ ಮಾಡುತ್ತಿದ್ದರೂ, ಹೇಗೆ ಸರ್ಕಾರದ ಆಡಳಿತ ಕ್ರಮದಲ್ಲಿ ಆ ಹಣ ಅನುಪಯುಕ್ತವಾಗುತ್ತಿದೆ ಮತ್ತು ಹೆಚ್ಚಿನ ಬದಲಾವಣೆಯನ್ನು ತರಲಾತ್ತಿಲ್ಲ, ಎಂಬುದನ್ನು ವಿವರಿಸುತ್ತಾರೆ. ಆದ್ದರಿಂದ ಇವರು ನೀಡುವ ಸಲಹೆ, ಸೂಚನೆಗಳು ಸರ್ಕಾರದ ಗಮನ ಸೆಳೆಯುವರಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ. ದೇವದಾಸಿ ಸಮಸ್ಯೆಯ ಅಧ್ಯಯನ ಹಾಗೂ ನಿರ್ಮೂಲನ ಕಾರ್ಯಕ್ರಮಗಳನ್ನು ಕುರಿತಂತೆ ಚರ್ಚಿಸಿರುವ ಈ ಪುಸ್ತಕ ಆ ದಿಕ್ಕಿನಲ್ಲಿ ಅತ್ಯಂತ ಉಪಯುಕ್ತವಾದದ್ದು. ○

5ನೇ ಪುಟದಿಂದ

ಜನರ ಬಗ್ಗೆ, ಅಲ್ಲಿ ಅವಿವಾಹಿತ ಕುಮಾರಿಯೊಬ್ಬಳಿಗೆ ಮಕ್ಕಳಾಗುವುದು ಗೌರವದ ಸಂಗತಿ, ಅಂಥ ಪ್ರಸಂಗದಲ್ಲಿ ಅವಳಿಗೆ ಹಣವಂತ ಪತಿ ಸಿಗುವುದಷ್ಟೇ ಅಲ್ಲ, ಅವಳ ತಂದೆಗೆ ಸಾಕಷ್ಟು ಹಣವನ್ನೂ ಕೊಡಲಾಗುತ್ತದೆಂದು ಹೇಳುತ್ತಾರೆ. ಬೈಬಲ್‌ನಷ್ಟೇ ಹಳೆಯ ಧರ್ಮಗ್ರಂಥವಾದ ‘ಹಳೆಯ ಒಡಂಬಡಿಕೆ’ಯಲ್ಲಿಯೂ ಸ್ತ್ರೀಗೆ ಮಕ್ಕಳಾಗದಿರುವುದು ಮಹಾಪಾಪವೆಂದು ಹೇಳಲಾಗಿದೆ.

(ಹೆಣ್ಣಿನ ಸ್ಥಾನ–ಮಾನ ಪುಸ್ತಕದಿಂದ)

RN 455/88
BOOK-POST/PERIODICALS

To,

If undelivered please return to :
Jagruthi Mahila Adhyayana Kendra
26, Ist Main Road, Vyalikaval
Bangalore-590 003